ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 92

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 17-03-2026

**SEHRI & IFTARI TIME**

**DAY :TUESDAY**

**RAMZAN : 27**

**DATE: 17.03.2026**

**END TIME OF SEHRI :5:12 AM**

**FAJAR AZAAN : 5:17 AM**

**IFTAR TIME : 6:34 PM**

ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ
ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

# ಸಚಿವರ ಅಸಮರ್ಪಕ ಉತ್ತರಕ್ಕೆ ಬೇಸರಗೊಂಡು ಪೀಠದಿಂದ ಎದ್ದು ಹೋದ ಸ್ಪೀಕರ್ ಖಾದರ್

**ಬೆಂಗಳೂರು, ಮಾ.16–** ಶಾಸಕರು ಕೇಳಿದ ಪ್ರಶ್ನೆಗಳಿಗೆ ಸಚಿವರು ಆಯಾ ಇಲಾಖೆಗಳಿಂದ ಸರಿಯಾಗಿ ಉತ್ತರ ನೀಡದೇ ಇದ್ದ ಮೇಲೆ ಯಾವ ಕಾರಣಕ್ಕೆ ಸದನ ನಡೆಸಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಕಲಾಪವನ್ನು ಮುಂದೂಡಿ ಹೊರ ನಡೆದ ವಿಲಕ್ಷಣ ಪ್ರಸಂಗ ಇಂದು ನಡೆಯಿತು.

ಪ್ರಶ್ನೋತ್ತರದ ಬಳಿಕ ಲಿಖಿತವಾಗಿ ಉತ್ತರ ಮಂಡಿಸುವ 230 ಪ್ರಶ್ನೆಗಳಿಗೆ ಸರ್ಕಾರದ ಪರವಾಗಿ ಗೃಹ ಸಚಿವ ಡಾ. ಜಿ ಪರಮೇಶ್ವರ್ 84 ಪ್ರಶ್ನೆಗಳಿಗೆ ಉತ್ತರ ಮಂಡಿಸಿದರು.ಬಿಜೆಪಿಯ ಸುರೇಶ್ ಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಆರ್. ಅಶೋಕ್ 250 ಪ್ರಶ್ನೆಗಳು ಎಂದರೆ ಕನಿಷ್ಠ 125 ಉತ್ತರಗಳಾದರೂ ಬರಬೇಕಿತ್ತು. ಆಗ ಶೇ.50ರಷ್ಟಾಗುತ್ತದೆ. ಆದರೆ ಇಲ್ಲಿ 84 ಯಾವ ಲೆಕ್ಕಕ್ಕೆ ಎಂದು ಆಕ್ಷೇಪಿಸಿದರು.
ಸಭಾಧ್ಯಕ್ಷರು ಇಂದು ನೀಡುವ ಎಚ್ಚರಿಕೆಯನ್ನು ಸೇರಿದರೆ ಐದು ಬಾರಿ ಸರ್ಕಾರಕ್ಕೆ ಚಾಟಿ ಬೀಸಿದ್ದಾರೆ. ಆದರೆ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ಆರ್.ಅಶೋಕ್ ತೀಕ್ಷ್ಣವಾಗಿ ಆಕ್ಷೇಪಿಸಿದರು.ಸಭಾಧ್ಯಕ್ಷ ಯು.ಟಿ.ಖಾದರ್ ಮಧ್ಯ



ಪ್ರವೇಶ ಮಾಡಿ, ಸರ್ಕಾರದ ಈ ಧೋರಣೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಈವರೆಗೂ ತಾವು ನಾಲ್ಕು ಬಾರಿ ಪೀಠದಿಂದ ಸ್ಪಷ್ಟ ಆದೇಶ ನೀಡಿದರೂ ಪರಿಸ್ಥಿತಿ ಸುಧಾರಣೆಯಾಗಿಲ್ಲ ಎಂದಾದರೆ, ಇದನ್ನು ಹಗುರವಾಗಿ ತೆಗೆದುಕೊಳ್ಳಲಾಗುವುದಿಲ್ಲ ಎಂದರು.

ಮೂರು ತಿಂಗಳಿಗೊಮೆ ಅಧಿವೇಶನ ನಡೆಸುವುದು ಶಾಸಕರು ತಮ ಸಮಸ್ಯೆಗಳನ್ನು ಚರ್ಚಿಸಲಿಕ್ಕಾಗಿ. ಇಲ್ಲಿ ಎಲ್ಲರೂ, ಎಲ್ಲಾ ಪಕ್ಷದವರು ಪ್ರಶ್ನೆಗಳನ್ನು ಕೇಳುತ್ತಾರೆ. ಪ್ರತಿದಿನ 15 ಪ್ರಶ್ನೆಗಳನ್ನು ಮಾತ್ರ ಚುಕ್ಕೆ ಗುರುತು ಎಂದು ಪರಿಗಣಿಸಿ ಇಲ್ಲಿ ಚರ್ಚೆ ಮಾಡಲು ಅವಕಾಶ ನೀಡಲಾಗುತ್ತದೆ. ಉಳಿದ ಪ್ರಶ್ನೆಗಳನ್ನು ಚುಕ್ಕೆ ರಹಿತ ಎಂದು ಪರಿಗಣಿಸಿ ಲಿಖಿತ ಉತ್ತರ ನೀಡಲಾಗುವುದು. ಗಮನ ಸೆಳೆಯುವ ಸೂಚನೆಯಡಿಯ 15ಕ್ಕಿಂತ ಹೆಚ್ಚು ಸದಸ್ಯರ ಅರ್ಜಿಗಳನ್ನು ಪರಿಗಣಿಸಬಾರದು ಎಂದು ಸಚಿವರು ಹೇಳುತ್ತಾರೆ. ಬೆಳಗ್ಗೆ ನಿಗದಿತ ಸಮಯಕ್ಕೆ ಕಲಾಪ ಆರಂಭಿಸಲು ಕೊರತೆ ಇರುತ್ತದೆ. ಈ ರೀತಿಯಾದರೆ ಸದನ ನಡೆಸಲಾಗುವುದಿಲ್ಲ. ಈ ಅಧಿವೇಶನಗಳು ನಡೆಯುವುದು ಸಚಿವರಿಗಾಗಿ ಅಲ್ಲ ಶಾಸಕರಿಗಾಗಿ ಎಂದು ಸಭಾಧ್ಯಕ್ಷರು ಒತ್ತಿ ಹೇಳಿದರು.

ಲಿಖಿತವಾಗಿ ಮಂಡಿಸಬೇಕಾದ ಉತ್ತರಗಳನ್ನು ಕಡೆಗಣಿಸುತ್ತಿರುವುದು ಸರಿಯಲ್ಲ. ಸಚಿವರು ಮತ್ತು ಆಯಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ತಮ ಬಳಿ ಬಂದು ಸಮಸ್ಯೆಯ ಬಗ್ಗೆ ಸ್ಪಷ್ಟ ವಿವರಣೆ ನೀಡಿದ ಹೊರತು, ತಾವು ಸದನ ನಡೆಸುವುದಿಲ್ಲ ಎಂದು ಹೇಳಿ ಸಭಾಧ್ಯಕ್ಷ ಯು.ಟಿ.ಖಾದರ್ ಕಲಾಪವನ್ನು ಮುಂದೂಡಿ ಹೊರ ನಡೆದರು.
ಮಹತ್ವದ ಬೆಳವಣಿಗೆ: ಆಡಳಿತ ಪಕ್ಷದವರೇ 2ನೇಪುಟಕ್ಕೆ

# ಕನ್ನಡ ಉಳಿಸಿ, ಬೆಳೆಸಲು ಹಾಗೂ ಕುಡಿಯುವ ನೀರಿಗಾಗಿ 'ಕನ್ನಡ ಸೇನೆ'ಯಿಂದ ಮನವಿ



ಧೈರ್ಯದ ದಾರಿ

**ರಾಯಚೂರು:** ಜಿಲ್ಲೆಯಲ್ಲಿ ಕನ್ನಡ ಭಾಷೆಯ ಉಳಿವು ಹಾಗೂ ಪ್ರಸ್ತುತ ಬೇಸಿಗೆಯ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ, ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಸಮಿತಿಯ ವತಿಯಿಂದ ಇಂದು ರಾಯಚೂರಿನ ಅಡಿಷನಲ್ (ಅಪರ) ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.
ಮನವಿಯಲ್ಲಿನ ಪ್ರಮುಖ ಬೇಡಿಕೆಗಳು ಇಲ್ಲಿವೆ:
ಕನ್ನಡ ನಾಮಫಲಕ ಕಡ್ಡಾಯ: ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು.
**ಕನ್ನಡ ಉಳಿಸಿ – ಬೆಳೆಸಿ:** ಆಡಳಿತದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಿ, ಭಾಷೆಯ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಬೇಕು.
**ಕುಡಿಯುವ ನೀರಿನ ಸಮಸ್ಯೆ:** ಬೇಸಿಗೆಯ ತಾಪ ಏರುತ್ತಿರುವುದರಿಂದ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಿ, ಸಮರ್ಪಕ ನೀರು ಪೂರೈಸಬೇಕು.
ಈ ಸಂದರ್ಭದಲ್ಲಿ ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಸಮಿತಿಯ ಗೋವಿಂದಪ್ಪ ಚವಾಣ್ ಜಿಲ್ಲಾ ಉಪಾಧ್ಯಕ್ಷರು ನಾಗಪ್ಪ ಜಿಲ್ಲಾ ಉಪಾಧ್ಯಕ್ಷರು ಅಂಬರೀಶ್ ನಾಯಕ್ ಜಿಲ್ಲಾ ಮುಖಂಡರು ಮಂಜುನಾಥ್ ರಾಯಚೂರು ನಗರ ಘಟಕ ಅಧ್ಯಕ್ಷರು ಶಿವರಾಜ್ ಬಡಿಗೇರ್ ಜಿಲ್ಲಾ ಸಹ ಕಾರ್ಯದರ್ಶಿ ವೀರನಗೌಡ ರಾಮಪ್ಪ ನಾಯಕ್ ಮಲಯಾಬಾದ್ ರಾಯಚೂರು ತಾಲೂಕ ಅಧ್ಯಕ್ಷರು ಪರಶುರಾಮ ಭೀಮಣ್ಣ ಸಂಗರೆಡ್ಡಿ ಜಗದೀಶ ಗುರುಬಸವ ಬಸವರಾಜ ಗೋವರ್ಧನ್ ಇನ್ನಿತರ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು

# ಮಾ.18ರಿಂದ ಎಸ್ .ಎಸ್.ಎಲ್.ಸಿ . ವಾರ್ಷಿಕ ಪರೀಕ್ಷೆಗಳು ಪ್ರಾರಂಭ: ಚಂದ್ರಶೇಖರ .ಡಿ.


ಧೈರ್ಯದ ದಾರಿ

**ಮಾನ್ವಿ:**ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಮಾನ್ವಿ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ. ಮಾತನಾಡಿ ತಾಲೂಕಿನಲ್ಲಿ 2025–26ನೇ ಸಾಲಿನ ಎಸ್ .ಎಸ್.ಎಲ್.ಸಿ ಪರೀಕ್ಷೆಗಳು ಮಾ.18ರಿಂದ ಬೆಳಿಗ್ಗೆ 10 ರಿಂದ ಪ್ರಾರಂಭಗೊಳ್ಳಲಿದ್ದು ವಿದ್ಯಾರ್ಥಿಗಳು ಮುಕ್ತವಾಗಿ ಪರೀಕ್ಷೆಗಳನ್ನು ಬರೆಯುವುದಕ್ಕೆ ಶಿಕ್ಷಣ ಇಲಾಖೆಯಿಂದ ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಅಖಂಡ ಮಾನವಿ ತಾಲೂಕಿನಲ್ಲಿ 2025–26ನೇ ಸಾಲಿನ ಎಸ್ .ಎಸ್.ಎಲ್.ಸಿ ಪರೀಕ್ಷೆಗೆ 5141 ವಿದ್ಯಾರ್ಥಿಗಳು ಹೊಸದಾಗಿ ನೋಂದಯಿಸಿಕೊಂಡಿದ್ದು , ಖಾಸಗಿ ಅಭ್ಯರ್ಥಿಗಳು ಹಾಗೂ ಪುನರಾವರ್ತಿತ ಅಭ್ಯರ್ಥಿಗಳಾಗಿ 874 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು ಒಟ್ಟು 6015 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಯನ್ನು ಬರೆಯಲಿದ್ದಾರೆ. ಅಖಂಡ ಮಾನವಿ ತಾಲೂಕಿನಲ್ಲಿ ಒಟ್ಟು 20 ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದ್ದು. 20 ಮುಖ್ಯ ಅಧೀಕ್ಷಕರು ಹಾಗೂ 4 ಉಪ ಮುಖ್ಯ ಅಧೀಕ್ಷಕರು, 20 ಪ್ರಶ್ನೆಪತ್ರಿಕೆ ಅಭಿರಕ್ಷಕರು ಹಾಗೂ 20 ಸ್ಥಾನಿಕ ಜಾಗೃತದಳ ಅಧಿಕಾರಿಗಳು ಮತ್ತು 7 ಮಾರ್ಗಾಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ ಹಾಗೂ



ಪರೀಕ್ಷಾ ಕೇಂದ್ರಗಳ ಸುತ್ತ ನಕಲು ತಡೆಯುವುದಕ್ಕೆ ಸೂಕ್ತ ಕ್ರಮ ಕೈಗೋಳಲಾಗಿದೆ ಹಾಗೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ.ಪರೀಕ್ಷೆಗಳು ಸಿ.ಸಿ.ಟೀವಿ ಕಣ್ಗಾವಲಿನಲ್ಲಿ ನಡೆಯಲಿದೆ ಎಂದು ತಿಳಿಸಿದರು.

# ಕನ್ನಡಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಉಚಿತ ಶುದ್ದ ಕುಡಿಯುವ ನೀರಿನ ವಿತರಣೆ: ಸೋಮಶೇಖರ ಎಸ್.ಕೆಂಚರೆಡ್ಡಿ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪಂಪಾ ಉದ್ಯಾನದ ಹತ್ತಿರ ಕರ್ನಾಟಕ ರಕ್ಷಣ ವೇದಿಕೆ ಶಿವರಾಮೇಗೌಡ ಬಣ ತಾಲೂಕು ಘಟಕ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸಾರ್ವಜನಿಕರಿಗಾಗಿ ಹಮ್ಮಿಕೊಂಡ ಶುದ್ದ ಕುಡಿಯುವ ನೀರು ಹಾಗೂ ಮಜ್ಜಿಗೆ ವಿತರಣೆ ಅರವಟ್ಟಿಗೆಗೆ ಮಾನ್ವಿ ಪೊಲೀಸ್ ಠಾಣೆಯ ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ ಚಾಲನೆ ನೀಡಿ ಮಾತನಾಡಿ ಈ ಬಾರಿ ಬೇಸಿಗೆಯಲ್ಲಿ ಬಿಸಿಲಿನ ತಾಪ ಹೆಚ್ಚಿರುವುದರಿಂದ ಪ್ರತಿದಿನ ಪಟ್ಟಣಕ್ಕೆ ಬರುವ ಗ್ರಾಮೀಣ ಭಾಗದ ಜನರಿಗೆ ಹಾಗೂ ವೃದ್ದರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಅತಿಯಾದ ಬಿಸಿಲಿರುವುದರಿಂದ ಬಯಾರಿಬರುವವರಿಗೆ ಕುಡಿಯುವ ನೀರು ಮಜ್ಜಿಗೆಯನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಜನರಿಗೆ ಅನುಕೂಲವಾಗುತ್ತದೆ ಯುವಕರು ಸಮಾಜ ಮುಖಿ ಕಾರ್ಯಕ್ರಮಗಳಲ್ಲಿ ಹೆಚ್ಚುಹೆಚ್ಚು ಭಾಗವಹಿಸುವುದರಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.
ಕರ್ನಾಟಕ ರಕ್ಷಣ ವೇದಿಕೆ ಶಿವರಾಮೇಗೌಡ ಬಣ ತಾಲೂಕು ಘಟಕದ ಅಧ್ಯಕ್ಷರಾದ ನರಸಿಂಹ ಎನ್.ಹೆಚ್ ಮಾತನಾಡಿ ಪ್ರತಿದಿನ ಸಾರ್ವಜನಿಕರಿಗೆ ಶುದ್ದಕುಡಿಯುವ ನೀರನ್ನು ನೀಡುವುದಕ್ಕಾಗಿ ಅರವಟ್ಟಿಗೆ ವ್ಯವಸ್ಥೆಯನ್ನು ಮಾಡಲಾಗಿದ್ದು ವಾರಕ್ಕೆ ಒಮ್ಮೆ ಮಜ್ಜಿಗೆಯನ್ನು ಕೂಡ ವಿತರಿಸಲಾಗುವುದು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದರು.

ಮುಖಂಡರಾದ ಸಂತೋಷ್ ಕುಮಾರ್ ಜೈನ್, ಕರವೇ ಪ್ರಾಧಾನ ಕಾರ್ಯದರ್ಶಿ ದೀಪಕ್ ಕುಮಾರ್ ಯಾದವ್, ತಾ. ಗೌರವಾಧ್ಯಕ್ಷರಾದ ಯಲ್ಲಪ್ಪ ನೆಲಗಲ್,ಚೇತನ್ ಕುಮಾರ್ ,ಚಂದ್ರ ಮುದ್ಲಾಪುರ್, ರವಿ ಮದ್ಲಾಪುರ್ ,ಶಿವು ಕುಮಾರ, ಆನಂದ್ ಸ್ವಾಮಿ, ಅನಿಲ್ ಕುಮಾರ್ ,ವಿನಯ ಕುಮಾರ್, ಬಿ.ಎಂ.ಸನತ್ ಕುಮಾರ್, ಹರೀಶ್ ಕಾತರಕಿ ಸೇರಿದಂತೆ ಇನ್ನಿತರರು ಇದ್ದರು.

# ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಸಾರ್ವಜನಿಕರ ಸಲಹೆ




ಧೈರ್ಯದ ದಾರಿ

**ರಾಯಚೂರು:** ರಾಯಚೂರು ಮಹಾನಗರ ಪಾಲಿಕೆಯ 2026–27ನೇ ಸಾಲಿನ ಆಯವ್ಯಯ ತಯಾರಿಕೆ ಹಿನ್ನಲೆಯಲ್ಲಿ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ದಂದು ಪಾಲಿಕೆಯ ಜೋನಲ್ 01ರ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಈ ವೇಳೆ ಜುಬಿನ್ ಮೊಹಾಪಾತ್ರ ಅವರು ಮಾತನಾಡಿ, ರಾಯಚೂರು ನಗರದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಸಾರ್ವಜನಿಕರ ನೇರ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದೆ ಎಂದರು.

ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ನಂತರ ಮೊದಲ ಬಜೆಟ್ ಇದಾಗಿದ್ದು,

ಪ್ರತಿಯೊಬ್ಬ ನಾಗರಿಕರು ಮುಕ್ತವಾಗಿ ತಮ್ಮ ಸಲಹೆ ಮತ್ತು ಸೂಚನೆಗಳನ್ನು ನೀಡಬೇಕು ಎಂದರು.

ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗರ ಪ್ರದೇಶ ಅಭಿವೃದ್ಧಿ ಹೊಂದಿದೆ. ಬಜೆಟ್ ಅನುಗುಣವಾಗಿ ಆದ್ಯತೆ ಮೇರೆಗೆ ಕೆಲಸ ಕಾಮಗಾರಿ ಮಾಡಲು ಸಲಹೆ ನೀಡಬೇಕೆಂದರು.

ಹಿಂದಿನ ವರ್ಷದಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ, ಕಸ ಮುಕ್ತ, ರಾಜ ಕಾಲುವೆ ಸ್ವಚ್ಛತ ಮಾಡಿ ಮಳೆಗಾಲದಲ್ಲಿ ತೊಂದರೆ ತಪ್ಪಿಸಲಾಗಿದೆ ಎಂದರು. ಪಾಲಿಕೆಯು ಆಶ್ರಯ ಯೋಜನೆಯಡಿ 2 ಸಾವಿರ ಮನೆಗಳ ನಿರ್ಮಾಣ ಮಾಡಿದೆ. ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಪಾಲಿಕೆಯ ಆಯುಕ್ತರು ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಮುಖಂಡರಾದ ರವಿಂದ್ರ ಜಲ್ದಾರ್ ಅವರು ಮಾತನಾಡಿ, ನಗರಕ್ಕೆ ರಾಂಪೂರ ಮತ್ತು ಕೃಷ್ಣ ನದಿಯಿಂದ ನೀರು ಸರಬರಾಜು ಮಾಡಲಾಗುತ್ತದೆ, ಮೋಟಾರುಗಳು ದುರಸ್ತಿಯಾದಲ್ಲಿ ನೀರು ಸರಬರಾಜು ನಿಲ್ಲುತ್ತದೆ. ಹೆಚ್ಚುವರಿ ಮೋಟಾರುಗಳ ವ್ಯವಸ್ಥೆ ಒದಗಿಸಿಕೊಡಬೇಕು. ಹೊಸ ಯೋಜನೆಗಳನ್ನು ರೂಪಿಸಬೇಕು. ನಗರದಲ್ಲಿ ಸುಸಜ್ಜಿತ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು ಎಂದರು.

ಈ ವೇಳೆ ಉಸ್ಮಾನಿಯಾ ತರಕಾರಿ ಮಾರುಕಟ್ಟೆಯ ಮಾಜಿ ಅಧ್ಯಕ್ಷರಾದ ಎನ್.ಮಹಾವೀರ ಅವರು ಮಾತನಾಡಿ, ನಗರ ದೊಡ್ಡ ಪ್ರಮಾದಲ್ಲಿ ಬೆಳೆಯುತ್ತಿದೆ. ಇದಕ್ಕೆ ತಕ್ಕಂತೆ ಮಾರುಕಟ್ಟೆ ವಿಸ್ತರಣೆ ಮಾಡಬೇಕು. ನಾಲ್ಕು ದಿಕ್ಕಿನಲ್ಲಿ ಜೋನ್ ವಲಯ ಮಾಡಿ, ತರಕಾರಿ ಮಾರುಕಟ್ಟೆ, ಹೂ–ಹಣ್ಣುಗಳ ಮಾರುಕಟ್ಟೆ, ಮಾಂಸ ಮಾರುಕಟ್ಟೆ ಮಾಡಬೇಕು ಎಂದರು.

ಈ ವೇಳೆ ದಲಿತ ಸಂಘಟನೆ ಮುಖಂಡ ರಾಜು ಪಟ್ಟಿ ಅವರು ಮಾತನಾಡಿ, ನಗರದಲ್ಲಿರುವ ಶಿಕ್ಷಣ ಸಂಸ್ಥೆಗಳಿಂದ ಸರಿಯಾದ ತೆರಿಗೆ ಸಂಗ್ರಹಣೆಯಾಗಬೇಕು. ನಗರದಲ್ಲಿ 2ನೇಪುಟಕ್ಕೆ

## ಮೊದಲನೇ ಪುಟದಿಂದ

ಆಗಿರುವ ಸಭಾಧ್ಯಕ್ಷರು ಈ ರೀತಿ ಕಲಾಪವನ್ನು ಮುಂದೂಡಿರುವುದು ಸರ್ಕಾರಕ್ಕೆ ಭಾರಿ ಮುಜುಗರ ತಂದಿದೆ. ಸಾಮಾನ್ಯವಾಗಿ ವಿರೋಧಪಕ್ಷದವರು ಗದ್ದಲ ಅಥವಾ ಸದನ ನಡೆಯಲು ಸಾಧ್ಯವಿಲ್ಲದಂತಹ ಕೋಲಾಹಲದ ವಾತಾವರಣ ಇದ್ದಾಗ ಅಧಿವೇಶನ ಮುಂದೂಡಿಕೆಯಾಗುತ್ತದೆ. ಆದರೆ ಸರ್ಕಾರದ ವಿರುದ್ಧವೇ ಸ್ಪೀಕರ್ ಅವರು ಸಿಟ್ಟಾಗಿ ಅಧಿವೇಶನ ಮುಂದೂಡಿದ್ದು ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲೇ ನಮೂದಾಗಿದೆ. ಈ ಮೊದಲು ಕಾಗೋಡು ತಿಮಪ್ಪ ಸ್ಪೀಕರ್ ಆಗಿದ್ದಾಗ ಈ ರೀತಿ ನಡೆದಿತ್ತು ಎನ್ನಲಾಗಿದೆ.

ಸಾಮಾನ್ಯವಾಗಿ ಸಭಾಧ್ಯಕ್ಷರು ಸರ್ಕಾರದ ಲೋಪಗಳನ್ನು ಸರಿದೂಗಿಸಿಕೊಂಡು ಅಧಿವೇಶನವನ್ನು ನಡೆಸುತ್ತಾರೆ. ವಿರೋಧ ಪಕ್ಷದವರು ಸ್ಪೀಕರ್ ಅವರು ನಿಷ್ಪಕ್ಷಪಾತವಾಗಿರಬೇಕು ಸರ್ಕಾರವನ್ನು ಸಹಿಸಬಾರದು ಎಂದು ಪದೇ ಪದೇ ಹೇಳುತ್ತಿರುತ್ತಾರೆ. ಈ ಬಾರಿ ವಿರೋಧ ಪಕ್ಷದ ನಾಯಕರು ಪ್ರಶ್ನೋತ್ತರದ ಸಂಬಂಧ ಪಟ್ಟಂತೆ ಸರ್ಕಾರವನ್ನು ಕಟು ಶಬ್ದಗಳಲ್ಲಿ ತೆಗೆದುಕೊಂಡಿದ್ದು ತರಾಟೆಗೆ ತೆಗೆದುಕೊಂಡಿದ್ದರು. ಆದರೆ ಸ್ಪೀಕರ್ ಅವರು ಒಂದು ಹೆಜ್ಜೆ ಮುಂದೆ ಹೋಗಿ ಕಲಾಪವನ್ನೆ? ಮುಂದೂಡುವ ಮೂಲಕ ಐತಿಹಾಸಿಕ ದಾಖಲೆಯನ್ನೆ ಮಾಡಿದ್ದಾರೆ. ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡಿದೆ.

# ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಸಾರ್ವಜನಿಕರ ಸಲಹೆ

ಸಾಕಷ್ಟು ರಸ್ತೆಗಳಲ್ಲಿ ಸಾರ್ವಜನಿಕ ಶೌಚಾಲಯಗಳಿಲ್ಲ. ಇದರಿಂದ ನಗರದ ಜನರಿಗೆ ತೊಂದರೆಯಾಗಿದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಬೇಕೆಂದರು. ಈ ವೇಳೆ ಬೀದಿಬದಿ ವ್ಯಾಪಾರಿಗಳ ಸಂಘದ ಮುಖ್ಯಸ್ಥ ಯೇಸುಮಿತ್ರ ಅವರು ಮಾತನಾಡಿ, ನಗರದ ಬೀದಿ ಬೀದಿಗಳಲ್ಲಿ ಸಣ್ಣ ಪುಟ್ಟ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು, ರಸ್ತೆ ತೆರವು ನೆಪದಲ್ಲಿ ಅಂಗಡಿಗಳನ್ನು ತೆರವು ಮಾಡುವ ಮುನ್ನ ಮಾಹಿತಿ ನೀಡಬೇಕು. ಬೀದಿಬದಿ ವ್ಯಾಪಾರಿಗಳಿಗೆ ಪ್ರತ್ಯೇಕವಾಗಿ ಮಳಿಗೆ ಮಾಡಿ ಒಂದೇ ಕಡೆಗೆ ಇರುವಂತೆ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದರು.

ಇದೇ ಸಂದರ್ಭಗಳಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತರಾದ ಶರಣಪ್ಪ, ಪಾಲಿಕೆಯ ಅಭಿವೃದ್ಧಿ ವಿಭಾಗದ ಉಪ ಆಯುಕ್ತರಾದ ಭರತ್, ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ, ಜಿಲ್ಲಾ ಪಂಚಾಯತ ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ್, ಪಾಲಿಕೆಯ ವಲಯ 01ರ ಉಪ ಆಯುಕ್ತರಾದ ಮಲ್ಲಿಕಾರ್ಜುನ, ಪಾಲಿಕೆಯ ಸಮನಯ ಅಧಿಕಾರಿ ಕೃಷ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ವಿವಿಧ ಮುಖಂಡರು ಸಭೆಯಲ್ಲಿ ಇದ್ದರು.

## ಶಿಸ್ತು, ಜ್ಞಾನ ಮತ್ತು ಸಂಸ್ಕಾರದ ಸಮಾಗಮ: ಶಿಕ್ಷಣ ಸಂಸ್ಥೆಗಳಿಂದ ಮಾತ್ರ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ಸಾಧ್ಯ. :ಶಾಸಕ ಜಿ. ಹಂಪಯ್ಯ ನಾಯಕ




ಧೈರ್ಯದ ದಾರಿ

**ಸಿರವಾರ :** ವಿದ್ಯಾರ್ಥಿಗಳ ಏಳಿಗೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದು,ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತಮಟ್ಟಕ್ಕೆ ಬೆಳೆದಾಗ ಸಂಸ್ಥೆಯ ಸೇವೆ ಸಾರ್ಥಕವಾಗುತ್ತದೆ. ಮಕ್ಕಳ ಏಳಿಗೆಗಾಗಿ ಹಗಲಿರುಳು ಶ್ರಮಿಸುತ್ತಿರುವ ಸಂಸ್ಥೆಯ ಮುಖ್ಯಸ್ಥ ದಂಪತಿಗಳ ಸೇವೆಗೆ ಆ ಭಗವಂತನ ಆಶೀರ್ವಾದ ಇರಲಿ, ಸಂಸ್ಥೆ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದು ನವಲಕಲ್ ಬೃಹನ್ಮಠದ ಪೂಜ್ಯ ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಜ್ಞಾನಗಂಗಾ ಶಾಲೆಯಲ್ಲಿ ಶನಿವಾರ ಹಮ್ಮಿಕೊಳ್ಳಲಾದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕ ಜಿ.ಹಂಪಯ್ಯ ನಾಯಕ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಶಿಕ್ಷಕರ ಮಾರ್ಗದರ್ಶನ ಕಾರಣ. ಸಂಸ್ಥೆ ಜ್ಞಾನದ ಹಸಿವನ್ನು ನೀಗಿಸಲು ಶ್ರಮಿಸುತ್ತಿದ್ದು, ಅದರ ಸದುಪಯೋಗ ವಿದ್ಯಾರ್ಥಿಗಳು ಪಡೆಯಬೇಕು ಎಂದು ಹೇಳಿದರು.

ಮುಖಂಡರಾದ ಚುಕ್ಕಿ ಸೂಗಪ್ಪ ಸಾಹುಕಾರ ಮಾತನಾಡಿದರು. ಜ್ಞಾನಗಂಗಾ ಶಾಲೆಯ ಮುಖ್ಯಸ್ಥ ವೆಂಕಟರೆಡ್ಡಿ ಬಲ್ಕಲ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಮೇಶ ದರ್ಶನಕರ್, ಜೆ.ದೇವರಾಜ ಗೌಡ,ಎಮ್ ಶ್ರೀನಿವಾಸ ಜಾಲಾಪೂರ ಕ್ಯಾಂಪ್,ಮಂತ್ರಜಾತಯ್ಯ ಸ್ವಾಮಿ ಯರಮರಸ ಮಠ,ಅಯ್ಯನಗೌಡ ಏರಡ್ಡಿ,ಡಾ.ಅಜ್ಮೀರ ಪಾಷ,
ಪ.ಪಂ ಅಧ್ಯಕ್ಷ ಹಾಜಿ ಚೌದ್ರಿ, ಸದಸ್ಯರಾದ ಹಸೇನಲಿಸಾಬ್, ಮೌಲಸಾಬ್ ವರ್ಚಸ್, ಹಾಗು ನರಸಿಂಹರಾವ್ ಕುಲಕರ್ಣಿ, ಜಂಬಣ್ಣ ನೀಲಗಲ್,ಬಸವರಾಜ ಮರಕಂದಿನ್ನಿ,ಎಂ ಫಕ್ರುದ್ದೀನ್, ಮಲ್ಲಿಕಾರ್ಜುನ ಹೂಗಾರ,
ಚನ್ನಪ್ಪ ಬೂದಿನಾಳ,ಸೇರಿದಂತೆ ಶಾಲೆಯ ಮುಖ್ಯೋಪಾಧ್ಯಾಯಿನಿ ಸುಲೋಚನಾ ವಿ ಬಲ್ಕಲ್, ಹಾಗು ಶಿಕ್ಷಕರಾದ ಶರಣಬಸವ ಹಿರೇಮಠ ನಾಗಡದಿನ್ನಿ, ಹಾಗು ಸಿಬ್ಬಂದಿ ಮಕ್ತಂಸಾಬ್, ವಿದ್ಯಾರ್ಥಿಗಳು ಹಾಗು ಪಾಲಕರು ಇದ್ದರು.

### ● ಲೇಖನ ●

# ಬಡತನ ಮತ್ತು ಬದುಕಿನ ಪಾಠ

ಬಾಲ್ಯವು ಬಡತನದಲ್ಲಿದ್ದರೆ ಅದು ಯಾವುದೇ ದುಃಖದ ವಿಷಯವಲ್ಲ. ಆದರೆ ತಂದೆಯ ಜೀವನವೇ ಬಡತನದಲ್ಲಿ ಕಳೆದರೆ, ಆ ಜೀವನದ ಬಗ್ಗೆ ಯೋಚಿಸಬೇಕಾದ ಪರಿಸ್ಥಿತಿ ಬರುತ್ತದೆ. ಏಕೆಂದರೆ ಜೀವನ ನಮಗೆ ಅವಕಾಶಗಳನ್ನು ಕೊಡುತ್ತದೆ; ಅವನ್ನು ಬಳಸಿಕೊಳ್ಳುವುದೇ ಮುಖ್ಯ.

ಯವ್ವನದಲ್ಲಿ ಬಡತನ ಇದ್ದರೂ ನಾವು ಚಿಂತಿಸುವ ಅಗತ್ಯವಿಲ್ಲ. ಬದಲಾಗಿ ಅದನ್ನು ಹೇಗೆ ದುಡಿದು ದೂರ ಮಾಡಬೇಕು ಎಂಬ ಆಲೋಚನೆ ಮಾಡಬೇಕು. ಪರಿಶ್ರಮ ಮತ್ತು ಸರಿಯಾದ ದಾರಿಯಲ್ಲಿ ಮಾಡಿದ ಪ್ರಯತ್ನ ಜೀವನವನ್ನು ಬದಲಾಯಿಸಬಹುದು. ಆದರೆ ನಮ್ಮ ಮುಪ್ಪಿನಲ್ಲೂ ಬಡತನ ಮುಂದುವರಿದರೆ, ನಾವು ಸಾರ್ಥಕ ಬದುಕಿನ ಕಡೆ ಸರಿಯಾದ ಹೆಜ್ಜೆ ಇಟ್ಟಿಲ್ಲವೆಂಬುದಕ್ಕೆ ಅದು ಸೂಚನೆ.

ಸುತ್ತಲಿನ ಜಗತ್ತು ನಮ್ಮನ್ನು ತುಳಿಯಲು ಪ್ರಯತ್ನಿಸಿದಾಗ ಕುಗ್ಗಿಬೀಳುವುದು ಸುಲಭ. ಆದರೆ ಅದನ್ನು ಎದುರಿಸಿ ಮತ್ತೆ ಎದ್ದು ನಿಲ್ಲುವುದು ಅದೇ ನಿಜವಾದ ಜೀವನದ ಧೈರ್ಯ.

ಬಡತನವನ್ನು ದೂರ ಮಾಡಲು ಎರಡು ಮಂತ್ರಗಳನ್ನು ಜಪಿಸಬೇಕು:
ಒಂದು – ದುಡಿಮೆ.
ಇನ್ನೊಂದು –ತಾಳ್ಮೆ.
ಈ ಎರಡು ಗುಣಗಳು ಇದ್ದರೆ ಯಾವುದೇ ಸಂಕಷ್ಟವನ್ನು ಗೆಲ್ಲಬಹುದು.

ಹಸಿವು ಮತ್ತು ಬಡತನದ ಜೀವನ ಕಲಿಸುವ ಪಾಠವನ್ನು ಯಾವ ವಿಶ್ವವಿದ್ಯಾಲಯವೂ ಕಲಿಸಲಾರದು. ಜೀವನವೇ ಅಂಥ ಅನುಭವಗಳಿಂದ ನಮಗೆ ಜ್ಞಾನ ನೀಡುತ್ತದೆ.

ಶ್ರೀಮಂತ ಮತ್ತು ಬಡವನ ನಡುವಿನ ವ್ಯತ್ಯಾಸ ತುಂಬಾ ಸರಳವಾಗಿದೆ. ಶ್ರೀಮಂತನು ಮುಂದಿನ ಜೀವನ ಸುಖವಾಗಿರಲೆಂದು ಇಂದು ಉಳಿತಾಯ ಮಾಡುತ್ತಾನೆ  ಹಣ ಕೂಡಿಡುತ್ತಾನೆ, ಫಿಕ್ಸ್ಡ್ ಡೆಪಾಸಿಟ್ ಮಾಡಿಸುತ್ತಾನೆ, ಜೀವ ವಿಮೆ ಮಾಡಿಸುತ್ತಾನೆ, ಬ್ಯಾಂಕ್ ಖಾತೆಯಲ್ಲಿ ಸಂಗ್ರಹ ಮಾಡುತ್ತಾನೆ.
ಆದರೆ ಬಡವನ ಆಲೋಚನೆ ಬಹುಸಾರಿ ಇಂದಿನ ದಿನದ ಮೇಲೆ ಮಾತ್ರ ಇರುತ್ತದೆ: ಇವತ್ತು ಏನು ತಿನ್ನೋಣ, ಏನು ನೋಡೋಣ, ಏನು ಉಡೋಣ, ಹೇಗೆ ಖರ್ಚು ಮಾಡೋಣ ನಾಳೆ ದೇವರು ನೋಡಿಕೊಳ್ಳುತ್ತಾನೆ ಎಂಬ ಭಾವನೆ. ಈ ಮನೋಭಾವವೇ ಬಡತನವನ್ನು ಮುಂದುವರಿಸುತ್ತಿರುತ್ತದೆ.

ಊಟವಿಲ್ಲದ ಪರಿಸ್ಥಿತಿಯಿಂದ ಊಟ ಮಾಡಲು ಸಮಯವಿಲ್ಲದಷ್ಟು ದುಡಿಯುವ ಜೀವನಕ್ಕೆ ಏರುವುದು ಅದೇ ನಿಜವಾದ ಶ್ರೀಮಂತಿಕೆ.

**ಮಹಿಬೂಬ್ ಮದ್ಲಾಪುರ**
**ಸಂಪನ್ಮೂಲ ವ್ಯಕ್ತಿಗಳು ಮಾನ್ವಿ.**

# ಜವಾಬ್ದಾರಿ ವಹಿಸಿಕೊಂಡವರೇ ಭವಿಷ್ಯದ ನಾಯಕರು: ಮೌನೇಶ ಹಿರೇಹಣಗಿ




ಧೈರ್ಯದ ದಾರಿ

**ಸಿರವಾರ:** "ವಿದ್ಯಾರ್ಥಿ ದೆಸೆಯಲ್ಲಿ ಯಾರು ಸವಾಲುಗಳನ್ನು ಎದುರಿಸಿ ಧೈರ್ಯದಿಂದ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೋ, ಅಂತಹವರು ಮಾತ್ರ ಭವಿಷ್ಯದಲ್ಲಿ ಉತ್ತಮ ನಾಯಕರಾಗಿ ಹೊರಹೊಮ್ಮಲು ಸಾಧ್ಯ," ಎಂದು ಸಿರವಾರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮೌನೇಶ ಹಿರೇಹಣಗಿ ಹೇಳಿದರು.
ಯರಾಮರಸದ ವೀರಭದ್ರೇಶ್ವರ ಮಠದಲ್ಲಿ ಸಿರವಾರದ ಬಸವೇಶ್ವರ ಪ್ರಥಮ ದರ್ಜೆ ಕಾಲೇಜು ಹಾಗೂ ರಾಯಚೂರಿನ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಎನ್‌ಎಸ್‌ಎಸ್ (NSS) ವಿಶೇಷ ಶಿಬಿರದಲ್ಲಿ 'ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ' ಎಂಬ ವಿಷಯದ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.
ನಾಯಕತ್ವದ ಗುಣ: ಕೇವಲ ಅಧಿಕಾರ ಚಲಾಯಿಸುವುದು ನಾಯಕತ್ವವಲ್ಲ, ಜವಾಬ್ದಾರಿಯನ್ನು ಹಂಚಿಕೊಂಡು ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವುದು ನಿಜವಾದ ನಾಯಕತ್ವದ ಲಕ್ಷಣ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.ವ್ಯಕ್ತಿತ್ವ ವಿಕಸನ: ಶಿಬಿರಾರ್ಥಿಗಳು ಇಂತಹ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಸಂಘಟನಾ ಶಕ್ತಿ ಮತ್ತು ನಾಯಕತ್ವದ ಗುಣಗಳು ಬೆಳೆಯುತ್ತವೆ ಎಂದು ತಿಳಿಸಿದರು.
ಗಣ್ಯರ ಉಪಸ್ಥಿತಿ:ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಅಧ್ಯಕ್ಷರಾದ ಶ್ರೀಮತಿ ಅನುರಾಧ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಖಅ/ಖಖ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಯೇಸುಮಿತ್ರಾ, ಕಾಲೇಜಿನ ಪ್ರಾಚಾರ್ಯರಾದ ಡಾ. ಧರ್ಮಣ್ಣ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.
ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಮಾರುತಿ, ಸುರೇಶ, ವೈಜಾನಾಥ್ ಸೇರಿದಂತೆ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಹಾಗೂ ಮಠದ ಭಕ್ತಾದಿಗಳು ಉಪಸ್ಥಿತರಿದ್ದರು.

**ಸುದ್ದಿ ಮತ್ತು ಜಾಹೀರಾತಿಗಾಗಿ**
**6360866626**

# ದುಬೈ ಏರ್‌ಪೋರ್ಟ್ ಬಳಿ ಡ್ರೋನ್ ದಾಳಿ: ವಿಮಾನ ಹಾರಾಟ ಸ್ಥಗಿತ



**ನವದೆಹಲಿ/ದುಬೈ,ಮಾ.16–** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ದಿನದಿಂದ ದಿನಕ್ಕೆ ಮತ್ತಷ್ಟು ಉಲ್ಬಣವಾಗುತ್ತಿದೆಇಂದಿಗೆ 17ನೇ ದಿನಕ್ಕೆ ಕಾಲಿಟ್ಟಿದ್ದು ಹೊಸದಾಗಿ ದುಬೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇಂಧನ ಟ್ಯಾಂಕ್‌ಮೇಲೆ ಡ್ರೋನ್ ದಾಳಿ ನಡೆಸಲಾಗಿದ್ದು, ಭಾರಿ ಬೆಂಕಿ ಕಾಣಿಸಿಕೊಂಡಿದೆ, ಈ ಹಿನ್ನೆಲೆಯಲ್ಲಿ ವಿಮಾನ ಹಾರಾಟ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಮುಂಜಾನೆ ದುಬೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಅಮೇರಿಕ–ಇಸ್ರೇಲ್–ಇರಾನ್ ಯುದ್ಧದ ಮಧ್ಯೆ ಮುನ್ನೆಚ್ಚರಿಕೆ ಕ್ರಮವಾಗಿ ಅಧಿಕಾರಿಗಳು ವಿಮಾನ ಹಾರಾಟ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು ಪ್ರಯಾಣಿಕರಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ದಾಳಿಯಿಂದ ಕಾಣಿಸಿಕೊಂಡ ಬೆಂಕಿ ನಂದಿಸಲು ನಾಗರಿಕ ರಕ್ಷಣಾ ತಂಡಗಳನ್ನು ತಕ್ಷಣವೇ ನಿಯೋಜಿಸಲಾಗಿದೆ ಮತ್ತು ದುಬೈನ ನಗರ ಕೇಂದ್ರಕ್ಕೆ ಸಮೀಪದಲ್ಲಿರುವ ವಿಶ್ವದ ಅತ್ಯಂತ ಜನನಿಬಿಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಒಂದಾದ ಘಟನೆಯಲ್ಲಿ ಇಲ್ಲಿಯವರೆಗೆ ಯಾವುದೇ ಸಾವು ನೋವಿನ ಬಗ್ಗೆ ವರದಿಯಾಗಿಲ್ಲ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ದುಬೈ ವಿಮಾನ ನಿಲ್ದಾಣದ ಬಳಿ ಸಂಭವಿಸಿದ ಸ್ಫೋಟದ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು ದೂರದಿಂದ ಬೃಹತ್ ಜ್ವಾಲೆಗಳು ಗೋಚರಿಸುವುದನ್ನು ತೋರಿಸಿದೆ, ಬೆಂಕಿಯ ಪ್ರಮಾಣ ಹೆಚ್ಚಾಗಿದೆ, ಇದರಿಂದ ವಿಮಾನ ನಿಲ್ದಾಣಕ್ಕೆ ಒಳ ಬರುವ ಮತ್ತು ಹೊರ ಹೋಗುವ ಎಲ್ಲಾ ವಿಮಾನಗಳ ಸಂಚಾರ ರದ್ದುಗೊಳಿಸಲಾಗಿದೆ.

"ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ಡ್ರೋನ್ ದಾಳಿ ನಡೆದ ಘಟನೆಯೊಂದು ಇಂಧನ ಟ್ಯಾಂಕ್‌ಗಳಲ್ಲಿ ಒಂದರ ಮೇಲೆ ಪರಿಣಾಮ ಬೀರಿದೆ. ದುಬೈ ನಾಗರಿಕ ರಕ್ಷಣಾ ತಂಡಗಳು ಪ್ರಸ್ತುತ ಬೆಂಕಿ ನಿಯಂತ್ರಿಸಲು ಹರಸಾಹಸ ಪಡುತ್ತಿವೆ. ಇಲ್ಲಿಯವರೆಗೆ ಯಾವುದೇ ಗಾಯಗಳು ವರದಿಯಾಗಿಲ್ಲ" ಎಂದು ಉನ್ನತ ಮೂಲಗಳು ತಿಳಿಸಿವೆ.

**ಬಂದರು ಸ್ಥಳಾಂತರಕ್ಕೆ ಸೂಚನೆ–**ಯುನೈಟೆಡ್ ಅರಬ್ ಎಮಿರೇಟ್ಸ್ ನಲ್ಲಿರುವ ಮೂರು ಪ್ರಮುಖ ಬಂದರುಗಳನ್ನು ಸ್ಥಳಾಂತರಿಸುವಂತೆ ಇರಾನ್ ಕರೆ ನೀಡಿದ ಒಂದು ದಿನದ ನಂತರ ಈ ದಾಳಿ ನಡೆದಿದೆ.

ಇರಾನ್ ನೆರೆಯ ರಾಷ್ಟ್ರದ ಅಮೆರಿಕ ಅಲ್ಲದ ಆಸ್ತಿಗಳಿಗೆ ಬೆದರಿಕೆ ಹಾಕಿರುವುದು ಇದೇ ಮೊದಲು. ಇರಾನ್‌ನ ತೈಲ ರಫ್ತುಗಳನ್ನು ನಿರ್ವಹಿಸುವ ಮುಖ್ಯ ಟರ್ಮಿನಲ್ ಇರುವ ಖಾರ್ಗ್ ದ್ವೀಪದ ಮೇಲೆ ಇತ್ತೀಚಿನ ದಾಳಿಗಳನ್ನು ನಡೆಸಲು ಯುಎಇಯಲ್ಲಿರುವ ಬಂದರುಗಳು, ಹಡಗುಕಟ್ಟೆಗಳು ಮತ್ತು ಅಡಗುತಾಣಗಳನ್ನು ಅಮೆರಿಕ ಬಳಸುತ್ತಿದೆ ಎಂದು ಇರಾನ್ ಆರೋಪಿಸಿದೆ.ಫೆಬ್ರವರಿ 28 ರಂದು ಇರಾನ್‌ನ ಸುಪ್ರೀಂ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರನ್ನು ಕೊಂದು ಅದರ ಕಾರ್ಯತಂತ್ರದ ಮತ್ತು ಆಡಳಿತಾತ್ಮಕ ಮೂಲಸೌಕರ್ಯಕ್ಕೆ ವ್ಯಾಪಕ ಹಾನಿಯನ್ನುಂಟುಮಾಡಿದ ನಂತರ ಇರಾನ್ ಮಧ್ಯಪ್ರಾಚ್ಯದಾದ್ಯಂತ ಅಮೆರಿಕ ನೆಲೆಗಳು ಮತ್ತು ಹಿತಾಸಕ್ತಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ.

ಗಲ್ಫ್ ಅರಬ್ ರಾಷ್ಟ್ರಗಳು ಅಮೆರಿಕದ ರಾಜತಾಂತ್ರಿಕ ಕಾರ್ಯಾಚರಣೆಗಳು, ಮಿಲಿಟರಿ ನೆಲೆಗಳು ಮತ್ತು ತೈಲ ಸೌಲಭ್ಯಗಳು, ಬಂದರುಗಳು, ವಿಮಾನ ನಿಲ್ದಾಣಗಳು, ಹೋಟೆಲ್‌ಗಳು ಮತ್ತು ವಸತಿ ಮತ್ತು ವಾಣಿಜ್ಯ ಕಟ್ಟಡಗಳಂತಹ ನಿರ್ಣಾಯಕ ಮೂಲಸೌಕರ್ಯಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ಸ್ಥಳಗಳನ್ನು ಗುರಿಯಾಗಿಸಿಕೊಂಡು 2,000ಕ್ಕೂ ಹೆಚ್ಚು ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಎದುರಿಸಿವೆ.

**ಮಾತುಕತೆಗೆ ಇರಾನ್ ಸಿದ್ಧವಿಲ್ಲ: ಟ್ರಂಪ್**–ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಕೊನೆಗೊಳಿಸಲು ಅಮೇರಿಕಾ ಮಾತುಕತೆಗೆ ಸಿದ್ಧವಿದ್ದರೂ, ಇರಾನ್ ತಯಾರಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಏರೋಸ್ಪೇಸ್ ಒನ್ ವಿಮಾನದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು ಪಶ್ಚಿಮ ಏಷ್ಯಾದಾದ್ಯಂತ ಹಬ್ಬಿದ ಯುದ್ಧ ನಿಲ್ಲಿಸಲು ಹಾಗೂ ಜಾಗತಿಕ ಮಾರುಕಟ್ಟೆ ತಲ್ಲಣಗಳ ನಿಯಂತ್ರಣಕ್ಕೆ ರಾಜತಾಂತ್ರಿಕ ಮಾತುಕತೆ ಪ್ರಗತಿಯಲ್ಲಿದೆಯೇ ಎನ್ನುವ ಪ್ರಶ್ನೆಗೆ, ಅವರು ಉತ್ತರಿಸಲಿಲ್ಲ. ಯಾವ ತೆರನಾದ ಮಾತುಕತೆ ನಡೆಯುತ್ತಿದೆ ಎನ್ನುವುದನ್ನೂ ಬಹಿರಂಗಪಡಿಸಲು ನಿರಾಕರಿಸಿದ್ದಾರೆ.ಮಾತುಕತೆಗೆ ಇರಾನ್ ತಯಾರಿದ್ದಾರೆ ಎಂದು ನನಗೆ ಅನಿಸುತ್ತಿಲ್ಲ, ಆದರೆ ಅವರು ತೀರಾ ಹತ್ತಿರದಲ್ಲಿದ್ದಾರೆ' ಅಮೆರಿಕದೊಂದಿಗೆ ಯಾವುದೇ ಮಾತುಕತೆ ಇಲ್ಲ ಎಂದು ಈ ಹಿಂದೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಈ ಹಿಂದೆ ಹೇಳಿದ್ದರು.

# ಸಹಕಾರ ರಂಗದ ಭೀಷ್ಮ ಕೆಎಚ್ ಪಾಟೀಲ್ ( 101 ನೆಯ ಜನ್ಮದಿನಾಚರಣೆಯ ನಿಮಿತ್ತ )

'ಪರಸ್ಪರ ಸಹಕಾರದಿಂದ ಸಮಾಜ ವಿಕಾಸ' ಎಂಬ ಧ್ಯೇಯದ ತಳಹದಿಯಲ್ಲಿ ಮಹತ್ತರವಾದ 'ಸಹಕಾರ ರಂಗದ ವೃಕ್ಷ' ಇಂದು ಬೆಳೆದು ಹೆಮ್ಮರವಾಗಿರಲು ಕಾರಣವಾದವರು ಸಹಕಾರ ರಂಗದ ಭೀಷ್ಮ ಎಂಬ ಖ್ಯಾತಿಯ ಕೆ ಎಚ್ ಪಾಟೀಲರು. ಪುಟ್ಟ ಹಳ್ಳಿ ಹುಲಕೋಟಿಗೆ ರಾಷ್ಟ್ರ ಹಾಗು ಅಂತರಾಷ್ಟ್ರೀಯ ಸಹಕಾರ ನಕ್ಷೆಯಲ್ಲಿ ಸ್ಥಾನ ದೊರಕಿಸಿ ಕೊಟ್ಟದ್ದು ಅವರ ಗರಿಮೆ.

ಸಹಕಾರದಲ್ಲಿ ಶಕ್ತಿಯಿದೆ, ಸಂಘಟನೆ ಇದೆ ಎಂಬ ಅರಿವನ್ನು ಎಲ್ಲರಿಗೂ ಮೂಡಿಸಿದ ಚೇತನ ಶಕ್ತಿ ಅವರು.
ರಾಜಕೀಯದಲ್ಲಿದ್ದೂ ರಾಜಕೀಯ ಮಾಡದ ಆದರ್ಶ ರಾಜಕಾರಣಿ. ಸಹಕಾರ ರಂಗವನ್ನು ರಚನಾತ್ಮಕ ದೃಷ್ಟಿಯಲ್ಲಿ ಸೃಜಿಸಿದ ಸಜ್ಜನ ಕನಸುಗಾರ. ಶೋಷಣಾರಹಿತ, ಸರ್ವ ಜನರ ಹಿತ ರಕ್ಷಣೆಯನ್ನು ಮಾಡುವ ಸರ್ವೋದಯ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ, ನಾಡಿನ ಪ್ರತಿಯೊಬ್ಬ ವ್ಯಕ್ತಿಯ ಬದುಕು ಬೆಳಗಬೇಕು ಎಂಬ ಯೋಚನೆಗಳನ್ನು ಸಾಮಾಜಿಕ ವಲಯದಲ್ಲಿ ಹಬ್ಬಿಸಿದ ದಿವ್ಯ ವ್ಯಕ್ತಿತ್ವ ಅವರದು.
ತಮ್ಮ ಕಾರ್ಯಕ್ಷೇತ್ರವಾದ ಗದಗವನ್ನು ಸಹಕಾರ ಆಂದೋಲನದ ಕಾಶಿ ಕ್ಷೇತ್ರವನ್ನಾಗಿಸಿದವರು ಕೆ ಹೆಚ್ ಪಾಟೀಲರು. ಅದೇ ಅವರ ಕರ್ಮಭೂಮಿ. ಅವರ ವ್ಯಕ್ತಿತ್ವವನ್ನು ರೂಪಿಸಿದ ವ್ಯವಹಾರಿಕ ಪ್ರಜ್ಞೆ, ಎದೆಗಾರಿಕೆ ಮತ್ತು ಛಲವಂತಿಕೆಯನ್ನು ಮೂಡಿಸಿದ ಪುಣ್ಯಭೂಮಿ.

ಕೆಲವರು ಕೆಲಸವನ್ನು ಮಾಡುತ್ತಾರೆ, ಮಾಡಲರಿಯದವರು ಮಾತನಾಡುತ್ತಾರೆ ಎಂಬ ಮಾತಿನಂತೆ ಶ್ರೀ ಕೆ ಎಚ್ ಪಾಟೀಲರು ಮಾತನಾಡಿದ್ದಕ್ಕಿಂತ ಮಾಡಿದ್ದೆ ಹೆಚ್ಚು. ತಮ್ಮ ರಾಜಕೀಯ ವಿರೋಧಿಗಳು ಸಹ ಮೆಚ್ಚುವಂತೆ ಕಾರ್ಯನಿರ್ವಹಿಸಿದ ಅವರು ಅತ್ಯಂತ ಸ್ಪಷ್ಟ ಮಾತು ಹಾಗೂ ನೇರ ನಡೆ-ನುಡಿ ಹೊಂದಿದವರು.


ಸಹಕಾರ ಆಂದೋಲನದ ಹರಿಕಾರ, ದಿಟ್ಟ ಹೋರಾಟಗಾರ, ಅಪರೂಪದ ರಾಜಕಾರಣಿ, ಸಮರ್ಥ ಆಡಳಿತಗಾರ ಕೆಲವೊಮ್ಮೆ ಅತ್ಯಂತ ಬೆರಗುಗೊಳಿಸುವಂತಹ ನಿಷ್ಠುರವಾದಿ ರಾಜಕಾರಣಿ. ಅನ್ಯಾಯ, ಶೋಷಣೆಗಳ ವಿರುದ್ಧ ಸಿಡಿದೇಳುತ್ತಿದ್ದ ಅವರ ಜನಪರ ನಿಲುವು ಹಾಗೂ ಅನುಕಂಪಗಳು ಇತರರಿಗೆ ಆದರ್ಶವಾಗಿದ್ದವು ಎಂದು ಅವರನ್ನು ಬಲ್ಲವರು ಹೇಳುತ್ತಾರೆ. ಅಪ್ಪಟ ಗಾಂಧಿವಾದಿಯಾಗಿದ್ದು "ಗ್ರಾಮಗಳ ಏಳಿಗೆಯಲ್ಲಿಯೇ ನಾಡಿನ ಏಳಿಗೆ" ಎಂಬ ಕನಸನ್ನು ಬೆನ್ನತ್ತಿ ಅದನ್ನು ನನಸು ಮಾಡಲು ಅವರು ರೂಪಿಸಿ ಬೆಳೆಸಿದ ಸಂಘ ಸಂಸ್ಥೆಗಳು ಸಾಕಷ್ಟು.

ಸಹಕಾರ ಸಂಘಗಳು, ಶೈಕ್ಷಣಿಕ ಸಂಸ್ಥೆಗಳು, ದೇವ ಮಂದಿರಗಳು, ರಾಮಕೃಷ್ಣ ಆಶ್ರಮ, ವಿಶಾಲ ಕರ್ನಾಟಕ ಪತ್ರಿಕೆ, ಧರ್ಮಶಾಲೆಗಳು, ಪ್ರಾಣಿ ಸಂಗ್ರಹಾಲಯ, ಕಾರ್ಖಾನೆಗಳು ಹೀಗೆ ಸಾವಿರಾರು ಕುಟುಂಬಗಳಿಗೆ ಆಧಾರವಾಗಿರುವ ಅವರ ಕಾರ್ಯಗಳು ಗಾಂಧೀಜಿಯವರು ಕಂಡುಕೊಂಡ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಕನಸನ್ನು ನನಸು ಮಾಡಿದ ಕೆ ಎಚ್ ಪಾಟೀಲರು ಸದಾ ಕ್ರಿಯಾಶೀಲರಾಗಿದ್ದ ವ್ಯಕ್ತಿ.

ಗದಗ ಜಿಲ್ಲೆಯ ಹುಲಕೋಟಿ ಗ್ರಾಮದ ಗೌಡರ ಮನೆತನದ ತಂದೆ ಶ್ರೀ ರಂಗನಗೌಡರ ಸ್ನೇಹ ಔದಾರ್ಯ, ತಾಯಿ ನಿಂಗಮ್ಮನವರ ಪ್ರೀತಿ, ಅನುಕಂಪ, ದಯೆ, ಧರ್ಮಬೀರು ವ್ಯಕ್ತಿತ್ವಗಳು ಅವರಲ್ಲಿ ಅಡಕವಾಗಿದ್ದವು. 1925ರ ಮಾರ್ಚ್ 16ರಂದು ಗದಗ್ ನಲ್ಲಿ ಅವರ ಜನನ.

ಶ್ರೀ ರಾಮಕೃಷ್ಣ ಪರಮಹಂಸರ ಪರಮ ಭಕ್ತರಾದ ಈ ಕುಟುಂಬಕ್ಕೆ ಕಂಚಿಶ್ರೀಗಳು ಹಾಗೂ ಕೈಲಾಸ ಆಶ್ರಮದ ತಿರುಚ್ಚಿ ಶ್ರೀಗಳ ಅನುಗ್ರಹ ಬಲವಿರುವ ಈ ಕುಟುಂಬದಲ್ಲಿ ಜನಿಸಿದ್ದು ಗೌಡರ ಪುಣ್ಯವೇ ಸರಿ. ತಂದೆ ರಂಗನಗೌಡರು ಶಿಕ್ಷಣ ಪ್ರಸಾರಕ್ಕಾಗಿ ಶ್ರಮಿಸಿದ, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ವ್ಯಕ್ತಿ. ಧಾರ್ಮಿಕ ಪ್ರವೃತ್ತಿಯ ಅವರು 'ತನಗಾಗಿ ಬದುಕುವುದಕ್ಕಿಂತ ಇತರರಿಗಾಗಿ ಬದುಕುವುದು ಶ್ರೇಷ್ಠ' ಎಂಬ ಆದರ್ಶಗಳನ್ನು ಮಕ್ಕಳಿಗೆ ಕಟ್ಟಿಕೊಟ್ಟರು.

ಹುಲಕೋಟಿಯಲ್ಲಿ ಪ್ರಾಥಮಿಕ ಶಿಕ್ಷಣ ಗದುಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದ ಬಾಲಕ ಕೃಷ್ಣೇಗೌಡರು ಸ್ವಾತಂತ್ರ್ಯ ಹೋರಾಟಕ್ಕಾಗಿ ಮಹಾತ್ಮ ಗಾಂಧೀಜಿಯವರು ನಡೆಸಿದ ಚಲೇಜಾವ್ ಚಳುವಳಿಯ ಉತ್ತುಂಗ ಕಾಲದಲ್ಲಿ ಶ್ರೇಷ್ಠ ವಾಗ್ಮಿಯಾಗಿ ರೂಪುಗೊಂಡವರು.
ಅತ್ಯುತ್ತಮ ಸ್ನೇಹಿತರ ದಂಡನ್ನು ಹೊಂದಿದ್ದ ಗೌಡರಿಗೆ ಸ್ನೇಹಿತರೆ ವಜ್ರಾಯುಧವಾಗಿದ್ದರು. ತಮ್ಮ 18ರ ತಾರುಣ್ಯದಲ್ಲಿಯೇ ಹುಲಕೋಟಿಯ ಸರಪಂಚರೆಂದು ಸರ್ವಾನುಮತದಿಂದ ಆಯ್ಕೆಯಾದ ಇವರು 1972 ರಲ್ಲಿ ಮಂತ್ರಿಯಾಗುವವರೆಗೆ ಕಾರ್ಯ ನಿರ್ವಹಿಸಿದವರು.



ಗದಗ ತಾಲೂಕಿನ ಪ್ರಭಾವಿ ಸಂಸ್ಥೆಗಳಾದ ಗದಗ್ ಬೆಟಗೇರಿ ನಗರಸಭೆ ಹಾಗೂ ಕಾಟನ್ ಸೇಲ್ ಸೊಸೈಟಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ಮುಕ್ತಿಗೊಳಿಸಲು ಸಿವಿಕ್ ಬೋರ್ಡ್ ಅನ್ನು ಸೃಷ್ಟಿಸಿ 1955ರ ಚುನಾವಣೆಯಲ್ಲಿ ಸಿವಿಕ್ ಬೋರ್ಡ್ ಭಾರಿ ಬಹುಮತ ಗಳಿಸುವ ಮೂಲಕ ಅವರ ಏಕಸ್ವಾಮ್ಯವನ್ನು ಕೊನೆಗಾಣಿಸಿದವರು.

1954ರಲ್ಲಿ ಎಐಸಿಸಿ ಸದಸ್ಯರಾದ ಅವರು ನಂತರ 1974ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು.
ಗ್ರಾಮ ಕೇಂದ್ರ ಹಾಗೂ ಉಗ್ರಾಣಗಳ ಕಲ್ಪನೆಯೇ ಇಲ್ಲದ ಕಾಲದಲ್ಲಿ ತಮ್ಮ ಊರಿಗೆ 1956 ರಲ್ಲಿ ಉಗ್ರಾಣ ಹಾಗೂ ಗ್ರಾಮ ಕೇಂದ್ರಗಳ ಶಂಕುಸ್ಥಾಪನೆಯನ್ನು ನೆರವೇರಿಸಿದವರು. ಉತ್ತಮ ವಾಗ್ಮಿಗಳಾಗಿದ್ದ ಕೆ ಹೆಚ್ ಪಾಟೀಲರು ಉತ್ತಮ ಲೇಖಕರೂ ಆಗಿದ್ದರು. ಸ್ಥಳೀಯ ನಾಗರಿಕ ದಿನಪತ್ರಿಕೆಯಲ್ಲಿ ಗ್ರಾಮೋದ್ಧಾರ ಹಾಗೂ ಸಹಕಾರ ಕುರಿತು ಅನೇಕ ಲೇಖನಗಳನ್ನು ಬರೆದು ಜನರನ್ನು ರಚನಾತ್ಮಕ ಕೆಲಸಗಳಿಗೆ ಪ್ರೇರೇಪಿಸಿದವರು.
ದಿ ಗದಗ್ ಕೋ ಆಪರೇಟಿವ್ ಕಾಟನ್ ಸೇಲ್ ಸೊಸೈಟಿಯಲ್ಲಿ ಸಹಕಾರಿಗಳ ಪರಿಷತ್ತನ್ನು 1957ರಲ್ಲಿ ಸಂಘಟಿಸಿದ್ದು ಸರ್ವೋದಯಕ್ಕೆ ಸಹಕಾರಿ ತತ್ವವೇ ತಳಹದಿ ಎಂದು ಸಾರಿದವರು.
ಇದೇ ಸಮಯದಲ್ಲಿ ಗದುಗಿನಲ್ಲಿ ಆಜಾದ್ ಹಿಂದ್ ಸೇವಾದಳ, ಬೆಟಗೇರಿಯಲ್ಲಿ ಆಜಾದ್ ಹಿಂದ್ ಸೇವಾ ಸಂಘಗಳು ಪಾಟೀಲರ ರಚನಾತ್ಮಕ ಧೋರಣೆಗೆ ಸ್ಪಂದಿಸಿ ಶೈಕ್ಷಣಿಕ ಸಾಮಾಜಿಕ ಸಾಹಿತ್ಯಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ನಾಂದಿ ಹಾಡಿದವು. ಕಾಟನ್ ಸೇಲ್ ಸೊಸೈಟಿಯಲ್ಲಿ ನಾಡಿನ ಮೊಟ್ಟಮೊದಲ ಉಗ್ರಾಣವನ್ನು 1957ರ ಡಿಸೆಂಬರ್ ಎರಡರಂದು ಉದ್ಘಾಟಿಸಲು ಕಾರಣರಾದವರು.
ಮೈಸೂರು ಸರ್ಕಾರದಿಂದ 1959 ರಲ್ಲಿ ಕಾಟನ್ ಸೇಲ್ಸ್ ಸೊಸೈಟಿಯು ರಜತ ಫಲಕವನ್ನು ನೀಡಿ ಸನ್ಮಾನಿಸಿತು. ಆ ಸಮಯದಲ್ಲಿ ವಾರ್ಷಿಕ ಸರ್ವ ಸದಸ್ಯರು ಹುಲಕೋಟಿಯಲ್ಲಿ ಸಭೆ ಸೇರಿ ರೈತರಿಗಾಗಿ ರೈತ ಭವನ ಗ್ರಂಥಾಲಯ ಹಾಗೂ ಪ್ರಯೋಗಾಲಯ ಸ್ಥಾಪನೆಯ ವಿಚಾರಗಳನ್ನು ಚರ್ಚಿಸಿ ಕಾರ್ಯಪ್ರವೃತ್ತರಾದರು. ಮಧ್ಯವರ್ತಿಗಳಿಂದ ಆಗುವ ಶೋಷಣೆಯನ್ನು ತಪ್ಪಿಸಲು ಕೃಷಿ ಹುಟ್ಟುವಳಿ ಮಾರುಕಟ್ಟೆ ಸಮಿತಿಯನ್ನು ಪ್ರವೇಶಿಸಿದ ಅವರು ಮುಂದೆ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು.

1960ರಲ್ಲಿ ರೈತ ಹಾಗೂ ಗ್ರಾಹಕರ ಹಿತ ರಕ್ಷಿಸಲು ಸಹಕಾರಿ ಹಣ್ಣು ಕಾಯಿಪಲ್ಲೆ ಮಾರಾಟ ಅಂಗಡಿಯನ್ನು ಪ್ರಾರಂಭಿಸಿದವರು ರೈತರ ಮಕ್ಕಳು ಶಿಕ್ಷಣ ಪಡೆಯಲು ನೆರವಾಗುವಂತೆ ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಗೆ ಜನರಲ್ ಹಾಸ್ಟೆಲ್ ನಿರ್ಮಾಣ ಹಾಗೂ ಗದಗ ಜಿಲ್ಲಾ ನಿರ್ಮಾಣದ ಕ್ರಿಯಾ ಸಮಿತಿಗೆ ಚಾಲನೆ ನೀಡಿದರು.

1961 ರಲ್ಲಿ ತಮ್ಮ ಎಪಿಎಂಸಿ ಚುನಾವಣೆಯ ದಿನವೇ ತಂದೆಯವರನ್ನು ಕಳೆದುಕೊಂಡ ಪಾಟೀಲರು ಮುಂದೆ ಛೇರ್ಮನ್ನರಾಗಿ ಆಯ್ಕೆಯಾದರು... ನಮ್ಮ ದೇಶದಲ್ಲಿ ಯೋಜನೆ ಯೋಜನೆಯ ಹಣ ವಿಚಾರಗಳಿಗೆ ಕೊರತೆ ಇಲ್ಲ ಆದರೆ ಪ್ರಾಮಾಣಿಕ ಕಾರ್ಯಕರ್ತರ ಕೊರತೆ ಇದೆ ಎಂಬುದನ್ನು ಮನದಂಡ ಅವರು ಸಜ್ಜನರ ಸಂಘಟನೆಯಲ್ಲಿ ನಿರತರಾದವರು.

1961 ರಲ್ಲಿ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸ್ವಾಗತ ಅಧ್ಯಕ್ಷ ಸ್ಥಾನ ವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಿದವರು... ಇದೇ ಸಮ್ಮೇಳನದಲ್ಲಿ ರಾಜ್ಯದ ಹೆಸರು ಕರ್ನಾಟಕ ಆಗಬೇಕೆಂದು ನಿರ್ಣಯ ಕೈಗೊಳ್ಳಲಾಗಿದ್ದು ಮುಂದೆ 1973 ರಲ್ಲಿ ದೇವರಾಜ್ ಅರಸು ಸಂಪುಟದ ಸಚಿವರಾಗಿ ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ನಾಮಕರಣ ಮಸೂದೆ ಮಂಡಿಸಿದ್ದು ಕೆಎಚ್ ಪಾಟೀಲರು ಎಂಬುದು ಗಮನಾರ್ಹ.

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆದ ಅಂತರಾಷ್ಟ್ರೀಯ ಸಹಕಾರ ಮೇಳದಲ್ಲಿ ಫ್ರಾನ್ಸ್ ನ ರಾಜಧಾನಿ ಪ್ಯಾರಿಸ್ ನ ಸಹಕಾರ ಸಮ್ಮೇಳನದಲ್ಲಿ ಭಾರತ ಪರ ಉಪನ್ಯಾಸ ನೀಡಿದವರು ಕೆ ಎಚ್ ಪಾಟೀಲರು. ಅವರ ಬುದ್ಧಿ ಹೃದಯ ಮನಸ್ಸು ಹಾಗೂ ನರನಾಡಿಗಳಲ್ಲಿ ಸಹಕಾರ ವ್ಯಾಪಿಸಿತ್ತು ಸಹಕಾರವೇ ಉಸಿರು ಮತ್ತು ಬದುಕಾಗಿದ್ದ ಇವರಿಗೆ ಇಫ್ಕೋ ಸಂಸ್ಥೆಯು ಶ್ರೇಷ್ಠ ಸಹಕಾರಿ ಪ್ರಶಸ್ತಿ ನೀಡುವುದರ ಮೂಲಕ ಸಹಕಾರ ರಂಗದ ಘನತೆಯನ್ನು ಹಾಗೂ ತನ್ನ ಪ್ರಶಸ್ತಿಯ ಗೌರವವನ್ನು ಹೆಚ್ಚಿಸಿಕೊಂಡಿತು ಎಂದರೆ ತಪ್ಪಿಲ್ಲ.

ರಾಜಕೀಯದಲ್ಲಿ ಹಲವಾರು ಏಳುಬೀಳುಗಳನ್ನು ಕಂಡ ಕೆಎಚ್ ಪಾಟೀಲರದ್ದು ಹೋರಾಟದ ಮನೋಭಾವ. ಬಡವರ ಪಕ್ಷಪಾತಿಯಾಗಿ ಜನಪರ ಕೆಲಸ ಕಾರ್ಯಗಳಲ್ಲಿ ಸಕ್ರಿಯರಾಗಿ ಕಾರ್ಯ ನಿರ್ವಹಿಸಿದ ಇವರಿಗೆ ಸೋದರ ಎಸ್ ಆರ್ ಪಾಟೀಲರು ಸಹಕಾರಿಯಾಗಿ ಕಾರ್ಯನಿರ್ವಹಿಸಿದರು. ಅಣ್ಣ ತಮ್ಮಂದಿರು ಹೇಗಿರಬೇಕು ಎಂಬುದನ್ನು ಇವರನ್ನು ನೋಡಿ ಕಲಿಯಬೇಕು ಎಂಬಂತೆ ಅವರ ಬಾಂಧವ್ಯ ಇತ್ತು ಎಂದು ನೋಡಿದವರು ಹೇಳುತ್ತಾರೆ. ಅಣ್ಣ ರಾಜಕೀಯದಲ್ಲಿ ಸಕ್ರಿಯವಾಗಿದ್ದು ಸಹಕಾರಿ ರಂಗದ ಭೀಷ್ಮನಾದರೆ, ತಮ್ಮ ಇಂಜಿನಿಯರಿಂಗ್ ವೃತ್ತಿಯನ್ನು ಹೊಂದಿರುವ ಚಿಂತಕ, ವೇದಾಂತಿ ಹಾಗೂ ಆಧ್ಯಾತ್ಮವಾದಿ. ಕನ್ನಡ ನಾಡಿಗೆ ವೇಮನನನ್ನು ಪರಿಚಯಿಸಿದ ಶ್ರೇಯಸ್ಸು ಎಸ್ ಆರ್ ಪಾಟೀಲರಿಗೆ ಸಲ್ಲುತ್ತದೆ.

ಕೆ ಎಚ್ ಪಾಟೀಲ್ ಅವರದ್ದು ಮುಚ್ಚುಮರೆ ಇಲ್ಲದ ಸ್ನೇಹಮಯಿ ವ್ಯಕ್ತಿತ್ವ. ಸದಭಿರುಚಿ, ಸಚ್ಚಾರಿತ್ರ್ಯ, ಸನ್ನಡತೆ ಹಾಗೂ ಸದ್ಭಾವನೆಗಳನ್ನು ರೂಡಿಸಿಕೊಂಡು ಸಾರ್ಥಕ ಬದುಕನ್ನು ನಡೆಸಿದವರು. ಒಬ್ಬ ಜನನಾಯಕ ತನ್ನಿಡೀ ಜೀವಿತ ಕಾಲದಲ್ಲಿ ಇಷ್ಟೊಂದು ಸಾಧಿಸಲು ಸಾಧ್ಯವೇ ಎಂದು ಪ್ರಶ್ನಿಸುವ ಮಟ್ಟಿಗೆ ಅವರ ಕಾರ್ಯ ಚಟುವಟಿಕೆಗಳು ಇದ್ದವು.

ಸರಿಸುಮಾರು ನೂರು ದೇಶಗಳ ಅಂತರಾಷ್ಟ್ರೀಯ ಸಹಕಾರ ಸಂಘಟನೆಯ ಅಧ್ಯಕ್ಷಗಿರಿ ವಹಿಸಿದ ಅವರ ಬದುಕು ಹೋರಾಟ, ಸಂಘರ್ಷ ಹಾಗೂ ವೈವಿಧ್ಯತೆಗಳಿಂದ ಕೂಡಿದ ಬದುಕಾಗಿತ್ತು.
ರಾಜಕಾರಣದಲ್ಲಿದ್ದರೂ ವೈಯುಕ್ತಿಕ ಹಿತಾಸಕ್ತಿಗಿಂತ ಅವರು ಮುಂದಿನ ಪೀಳಿಗೆಯ ಶ್ರೇಯೋಭಿವೃದ್ಧಿಯ ಚಿಂತನೆ ಮಾಡಿದವರು. ತಮ್ಮ ಕೆಲಸಗಳಲ್ಲಿ ಸಾಕಷ್ಟು ಬಾರಿ ಅವರು ಸೋಲನ್ನು ಅನುಭವಿಸಿದ್ದರೂ ಹತಾಶರಾಗಲಿಲ್ಲ, ಬದಲಾಗಿ ಸೋಲನ್ನೇ ಸೋಲಿಸುವಂತೆ ಅವರು ಕಾರ್ಯನಿರ್ವಹಿಸಿದರು.

ದಿ ಗದಗ್ ಕೋ ಆಪರೇಟಿವ್ ಕಾಟನ್ ಸೇಲ್ ಸೊಸೈಟಿ ಗದಗ ಪರಿಸರದ ಸಹಕಾರ ಸಂಸ್ಥೆಗಳ ಮಾತೃ ಸಂಸ್ಥೆಯಾಗಿದೆ. ಇದರ ಅಡಿಯಲ್ಲಿ ಅಪಾರ ಸಂಖ್ಯೆಯ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಗ್ರಾಹಕ ಸಹಕಾರಿ ಸಂಘಗಳು, ಪತ್ತಿನ ಸಹಕಾರಿ ಸಂಘಗಳು, ಮಾರಾಟ ಸಹಕಾರ ಸಂಘಗಳು ಸಹಕಾರ ರಂಗದ ಕೀರ್ತಿಯನ್ನು ಸಾರುತ್ತ ಸಂಬಂಧಿತ ಜನರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

ದೇಶದ ಸಹಕಾರ ರಂಗದಲ್ಲಿ ಹತ್ತು ಹಲವು ಮೊದಲುಗಳನ್ನು ಸಾಧಿಸಿ, ಛಲದಂಕ ಮಲ್ಲನಾಗಿ ಕಾರ್ಯ ನಿರ್ವಹಿಸಿದ ಸಹಕಾರರಂಗದ ಭೀಷ್ಮ ಕೆ ಎಚ್ ಪಾಟೀಲರ 101ನೇ ಜಯಂತಿಯಂದು ಅವರಿಗೆ ಎಲ್ಲ ಸಹಕಾರಿಗಳ ಪರವಾಗಿ ಒಂದು ನುಡಿ ನಮನ

**-ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ್**

# ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕವನ್ನು ಬಿಡುಗಡೆಗೊಳಿಸಿದ ಸಚಿವ ಎನ್.ಎಸ್.ಬೋಸರಾಜು.

ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿನ ಅಮರಶಿವ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರೀಷತ್ ತಾಲೂಕು ಘಟಕದವತಿಯಿಂದ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ರವರು ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿ ಕನ್ನಡನಾಡಿನ ಗಡಿಭಾಗದಲ್ಲಿರುವ ಬೆಳಗಾವಿ, ರಾಯಚೂರು, ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೆಚ್ಚಿನ ಕನ್ನಡ ಪರ ಕಾರ್ಯಕ್ರಮಗಳ ಮೂಲಕ ಅಲ್ಲಿನ ಜನರಲ್ಲಿ ಕನ್ನಡ ಭಾಷೆ, ನಾಡು,ನುಡಿ ಕುರಿತು ಜಾಗೃತಿ ಮೂಡಿಸುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಗಡಿ ಭಾಗದಲ್ಲಿ ಸಂಘರ್ಷಗಳು ಕಡಿಮೆಯಾಗಿವೇ ರಾಯಚೂರು ಜಿಲ್ಲೆಯ ಗಡಿ ಭಾಗದ ಕೃಷ್ಣ ಗ್ರಾಮದ ಕನ್ನಡ ಶಾಲೆಗಳಿಗೆ ರಾಯಚೂರು ಜಿಲ್ಲಾ ಪಂಚಾಯಿತಿ ಸಿ.ಇ.ಓ. ರವರನ್ನು ಕಳುಹಿಸಿ ಅಲ್ಲಿನ ಶಾಲಾ ಮಕ್ಕಳಿಗೆ ಕನ್ನಡ ಪಠ್ಯ ಪುಸ್ತಕಗಳನ್ನು ವಿತರಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ವಿಧಾನಪರೀಷತ್ ಅಧಿವೇಶನದಲ್ಲಿ ಸಭಾಪತಿ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ ಹಾಗೂ ದೌರ್ಜನ್ಯಗಳ ಕುರಿತು ಚರ್ಚೆನಡೆಸಿ ಆಸಿಡ್ ದಾಳಿಯಿಂದ ನೊಂದ ಮಹಿಳೆಯರಿಗೆ ಮಾಸಿಕ 50ಸಾವಿರ ರೂಗಳವರೆಗೆ ಸಹಾಯಧನವನ್ನು ಹೆಚ್ಚಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ ಜೊತೆಗೆ ವಸತಿ ಹಾಗೂ ಉಚಿತ ಆರೋಗ್ಯ ಚಿಕಿತ್ಸೆ ನೀಡುವ ಕುರಿತು ವಿಧಾನಪರೀಷತ್ ಸಭಾನಾಯಕನಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚೆನಡೆಸಿ ಜಾರಿ ಮಾಡಿಸಲಾಯಿತು.

ರಾಜ್ಯದಲ್ಲಿ 1565 ಮಂಗಳಮುಖಿಯರಿದ್ದು ಅವರಲ್ಲಿ ಹೆಚ್ಚಿನ ಜನ ಹೋಟೆಲ್ ಹಾಗೂ ರಸ್ತೆ,ಸಾರ್ವಜನಿಕ ಪ್ರದೇಶಗಳಲ್ಲಿ ಭೀಕ್ಷಾಟನೆ ಮಾಡುತ್ತಿರುವುದು ಕಂಡುಬರುತ್ತರೆ ಮಂಗಳಮುಖಿಯರ ಜೀವನ ಸುಧಾರಣೆಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡಿದ್ದು ಸಮಾಜ ಹಾಗೂ ಅವರ ಕುಟುಂಬದವರು ಕೂಡ ಕೈಜೋಡಿಸಬೇಕಾಗಿದೆ. ಹಾಗೂ ಸಮಾಜದಲ್ಲಿ ಅವರನ್ನು ಗೌರವದಿಂದ ಕಾಣಬೇಕಾಗಿದೆ ಲೇಖಕರಾದ ಅಂಬಮ್ಮ ಪ್ರತಾಪಸಿಂಗ್ ರವರು ಮಂಗಳ ಮುಖಿಯರ ಜೀವನವನ್ನು ಅಧ್ಯಾಯನ ನಡೆಸಿ ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕವನ್ನು ರಚಿಸಿದು ಅವರು ಪುಸ್ತಕದಲ್ಲಿ ದಾಖಲಿಸಿರುವಂತೆ ಮಂಗಳ ಮುಖಿಯರ ಸಮಸ್ಯೆಗಳ ಬಗ್ಗೆ ಅಧ್ಯಾಯನ ನಡೆಸಿ ಅವರು ಕೂಡ ಸಮಾಜದಲ್ಲಿ ಗೌರವಯುತವಾಗಿ ಬದುಕುವುದಕ್ಕೆ ಅಗತ್ಯ ಕ್ರಮವನ್ನು ಸರ್ಕಾರದಿಂದ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಶಾಸಕ ಹಂಪಯ್ಯನಾಯಕ ಮಾತನಾಡಿ ತಾಲೂಕಿನ ಗಡಿ ಭಾಗದ ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಸಾಹಿತ್ಯ ಪರೀಷತ್ ವತಿಯಿಂದ ಹೆಚ್ಚು,ಹೆಚ್ಚು ಕಾರ್ಯಕ್ರಮಗಳನ್ನು ಅಯೋಜಿಸುವ ಮೂಲಕ ಗ್ರಾಮೀಣ ಸಾಹಿತಿಗಳಿಗೆ , ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವಂತೆ ಕರೆ ನೀಡಿದರು
ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕ ಕುರಿತು ಮಾಹಿತಿನೀಡಿದರು. ಅಂತರ್ಧ್ವನಿ ಕೃತಿಯ ಲೇಖಕರಾದ ಅಂಬಮ್ಮ ಪ್ರತಾಪಸಿಂಗ್ ಪುಸ್ತಕದ ಕುರಿತು ಮಾತನಾಡಿದರು.

11 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವ ಅಧ್ಯಕ್ಷರಾದ ಡಾ.ಬಸವಪ್ರಭುಪಾಟೀಲ ಬೆಟ್ಟದೂರು ಮಾತನಾಡಿದರು. ಸಚಿವ ಎನ್.ಎಸ್.ಬೋಸರಾಜು,ಶಾಸಕ ಹಂಪಯ್ಯನಾಯಕ, ಕಸಾಪ. ತಾ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಅಂತರ್ಧ್ವನಿ ಕೃತಿಯು ಲೇಖಕರಾದ ಅಂಬಮ್ಮ ಪ್ರತಾಪಸಿಂಗ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಕಾರ್ಯಕ್ರಮದಲ್ಲಿ ಮುಖಂಡರಾದ ಶರಣಯ್ಯ ಕೆ. ಗುಡದಿನ್ನಿ, ಕಸಾಪ. ತಾ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಜಿಲ್ಲಾ ಕಸಾಪ.ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು. ಹೆಚ್.ಶರ್ಫುದ್ದೀನ್ ಪೋತ್ನಾಳ್, ಹನುಮಂತಪ್ಪ ಕೊಟ್ನೆಕಲ್, ಲಕ್ಷ್ಮಣ ಜಾನೇಕಲ್, ಜಿ.ಎಸ್. ಬಾಲಾಜಿಸಿಂಗ್,ರವಿಶರ್ಮ,ಸೇರಿದಂತೆ ಕಸಾಪ ತಾಲೂಕು ಘಟಕದ ಪಾಧದಿಕಾರಿಗಳು ಹಾಗೂ ಮುಖಂಡರು , ಗ್ರಾಮಸ್ಥರು ಭಾಗವಹಿಸಿದರು.

# ಬಲಗೈ ಸಮುದಾಯಗಳ ಬೃಹತ್ ಹೋರಾಟದ ಕರಪತ್ರ ಬಿಡುಗಡೆ



**ಬೀದರ:ಮಾ.16:**ಬಲಗೈ ಸಮುದಾಯಗಳ ಒಳಮೀಸಲಾತಿ ಹೋರಾಟ ಸಮಿತಿ ಬೀದರ ವತಿಯಿಂದ ಮಂಗಳವಾರ ನಗರದಲ್ಲಿ ಬೃಹತ್ ಹೋರಾಟಕ್ಕೆ ಸಂಬಂಧಿಸಿದ ಕರಪತ್ರವನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಮಹೇಶ ಗೋರನಾಳಕರ್ ಮಾತನಾಡಿ, ರಾಜ್ಯದಲ್ಲಿ ಜಸ್ಟೀಸ್ ನಾಗಮೋಹನದಾಸ್ ಅವರ ಒಳಮೀಸಲಾತಿ ವರದಿಯಿಂದ ಉಂಟಾದ ಅವೈಜ್ಞಾನಿಕ ಗೊಂದಲದಿಂದ ಪ್ರವರ್ಗ (ಬಿ) ಹಾಗೂ ಪ್ರವರ್ಗ (ಸಿ) ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಯಾವುದೇ ಸಮುದಾಯದ ಹಕ್ಕನ್ನು ನಾವು ಕಸಿದುಕೊಳ್ಳಲು ಕೇಳುತ್ತಿಲ್ಲ. ನಮ್ಮಗೆ ದಕ್ಕಬೇಕಾದ ಮೀಸಲಾತಿಯನ್ನು ನೈತಿಕವಾಗಿ ಕೇಳುವುದು ನಮ್ಮ ಸ್ವಾಭಿಮಾನದ ಹಕ್ಕಾಗಿದೆ ಎಂದು ತಿಳಿಸಿದರು.
ಆದ್ದರಿಂದ ನಮ್ಮ 101 ಸಮುದಾಯಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಸರ್ಕಾರ ಬಿಂದು ಶ್ರೇಣಿಯಲ್ಲಿ ಉಂಟಾದ ಗೊಂದಲವನ್ನು ಸರಿಪಡಿಸಿ ನ್ಯಾಯ ನೀಡಬೇಕು ಎಂದು ಒತ್ತಾಯಿಸಿ, ಮಾರ್ಚ್ 17, 2026 ರಂದು ಬೀದರದಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬೀದರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ವಿಠಲದಾಸ ಪ್ಯಾಗೆ ಮಾತನಾಡಿ, ಬಲಗೈ ಸಮುದಾಯವು ಒಳಮೀಸಲಾತಿಗೆ ವಿರೋಧಿಯಲ್ಲ. ಆದರೆ ಕೆಲವರು ಉದ್ದೇಶಪೂರ್ವಕವಾಗಿ ಬಲಗೈ ಸಮುದಾಯದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಹೆಚ್.ಸಿ. ಮಹಾದೇವಪ್ಪಾ, ಡಾ.ಜಿ. ಪರಮೇಶ್ವರ ಹಾಗೂ ಪ್ರಿಯಾಂಕ್ ಖರ್ಗೆ ಅವರಿಗೆ ಅವಮಾನ ಮಾಡುವ ಮೂಲಕ ಸಮಾಜಗಳಲ್ಲಿ ದ್ವೇಷ ಹುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಇಂತಹ ಅಶಾಂತಿ ಮೂಡಿಸುವವರಿಗೆ ತಕ್ಕ ಉತ್ತರ ನೀಡುವುದಾಗಿ ಹೇಳಿದರು.
ಹಿರಿಯರಾದ ಡಾ. ಕಾಶಿನಾಥ ಚೆಲ್ವಾ ಮಾತನಾಡಿ, ಮಾರ್ಚ್ 17 ರಂದು ನಡೆಯುವ ಹೋರಾಟವು ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಡೆಯುತ್ತಿದೆ. ಬೀದರ ಜಿಲ್ಲೆಯ ಜನತೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳು ತಮ್ಮ ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯರಾದ ಅರುಣ ಪಟೇಲ್, ಸಂಜುಕುಮಾರ ಸಾಗರ, ಪವನ ಮೀಟಾರೆ, ಪ್ರಕಾಶ ರಾವಣ, ರಾಹುಲ್ ಡಾಂಗೆ, ವಿನೋದ ಬಂದಗೆ, ಪ್ರದೀಪ್ ನಾಟೇಕರ್, ಸೂರ್ಯಕಾಂತ ಸಾಧೂರೆ, ಭೀಮರಾವ ಮಾಲಗತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.
ಪ್ರಮುಖರಾದ ಶಿವಕುಮಾರ ನಿಲಿಕಟ್ಟಿ, ರಾಜಕುಮಾರ ಮೂಲಭಾರತಿ, ಸಂಜುಕುಮಾರ ಮೇತ್ರೆ, ಉದಯ ನಾಯಕ, ಮುಕೇಶ್ ರಾಯ್, ಸುನೀಲ್ ಡೊಳೆ, ಮಲ್ಲಿಕಾರ್ಜುನ ಮೊಳಕೇರೆ, ಶಿವಕುಮಾರ ತುಂಗಾ, ಧನರಾಜ ಮುಸ್ತಾಪೂರ, ಸಂದೀಪ್ ಕಾಂಟೆ, ಸತೀಶ್ ಲಕ್ಕಿ, ಪುಟ್ಟು ದೀನೆ, ಶರಣು ಫುಲೆ, ಪ್ರವೀಣ ಕರಂಜೆ, ದಿನೇಶ್ ಶಿಂದೆ, ಸಂತೋಷ ಸೂರ್ಯವಂಶಿ, ವಿಠಲ ಕಾಂಬಳೆ, ಲಕ್ಷ್ಮಣ ಶೇರಿಕರ್, ತುಕಾರಾಮ ಯರನಳ್ಳಿ, ದಿಲೀಪ್ ಸನ್ನೂರಕರ್ ಹಾಗೂ ಶ್ರೀನಿವಾಸ ದಯಾಳ ಭಾಗವಹಿಸಿದ್ದರು.

ಮಹಿಳಾ ಮುಖಂಡರಾದ ಸುಧಾಮಣಿ ಗುಪ್ತಾ, ಗಂಗಮ್ಮ ಫುಲೆ, ರಂಜೀತಾ ಜೈನೋರ್, ಮಹಾದೇವಿ ನಿಲಿಕಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಯಶಸ್ವಿ



**ಕಲಬುರಗಿ: ಮಾ.16:**ನಗರದ ದರಿಯಾಪುರ ಬಡಾವಣೆಯಲ್ಲಿರುವ ಶ್ರೀ ಚಂದ್ರಶೇಖರ್ ಡಿ. ಪಾಟೀಲ್ ರೇವೂರ್ ಸ್ಮಾರಕ ಔಷಧ ಭವನದಲ್ಲಿ ಸಂಪೂರ್ಣೇಶ್ವರಿ ಮಹಿಳಾ ಸಬಲೀಕರಣ ಒಕ್ಕೂಟದ ವತಿಯಿಂದ ಆಯೋಜಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.
ಸಮಾಜ ಸೇವಕಿ ಲಕ್ಷ್ಮೀ ದತ್ತಾತ್ರೇಯ ಪಾಟೀಲ್ ರೇವೂರ್ ಹಾಗೂ ಕರ್ನಾಟಕ ಬಿಜೆಪಿ ವಕ್ತಾರ ಡಾ. ಸುಧಾ ಆರ್. ಹಾಲಕಾಯಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.
ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮಹತ್ತರ ಸಾಧನೆಗಳನ್ನು ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು. ಮಹಿಳೆಯರ ಶಕ್ತಿ, ಪ್ರತಿಭೆ ಮತ್ತು ಸೇವೆಯನ್ನು ಗುರುತಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.
ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳಾ ಸಾಧಕರಿಗೆ "ಸಂಪೂರ್ಣೇಶ್ವರಿ ಸ್ಫೂರ್ತಿದಾಯಕ ಮಹಿಳಾ ಪ್ರಶಸ್ತಿ" ಪ್ರದಾನ ಮಾಡಲಾಯಿತು. ಸಮಾಜ ಸೇವೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹಿಳೆಯರನ್ನು ಪ್ರಶಸ್ತಿ ನೀಡಿ ಗೌರವಿಸಲಾಯಿತು.
ಈ ಕಾರ್ಯಕ್ರಮದಲ್ಲಿ ಉಪ ಮೇಯರ್ ತೃಪ್ತಿ ಎಸ್. ಲಾಖೆ, ವಿರೋಧ ಪಕ್ಷದ ನಾಯಕಿ ಶೋಭಾ ಗುರುರಾಜ ದೇಸಾಯಿ, ಡಾ. ಸ್ನೇಹಾ ಕೆ., ಕವಿತಾ ಚೌಹಾಣ್, ಡಾ. ಶ್ವೇತಾ ನಿಧಿ, ಅಮೂಲ್ಯ ಶೆಟ್ಟಿ, ಸ್ನೇಹಲ್ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

# ಶರಣರ ಬಗ್ಗೆ ಅವಹೇಳನಕಾರಿ ಪೋಸ್ಟ್: ಕ್ರಮಕ್ಕೆ ಒತ್ತಾಯ



**ಜೇವರ್ಗಿ:ಮಾ.16:** ವಿಶ್ವಗುರು ಬಸವಣ್ಣ ಹಾಗೂ ಶಿವಶರಣೆ ಶರಣೆ ಅಕ್ಕಮಹಾದೇವಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಕಿಡಿಗೇಡಿಯನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ತಾಲ್ಲೂಕು ಜೈ ಕರವೇ ಅಧ್ಯಕ್ಷರಾದ ಶರಭು ಕಲ್ಯಾಣಿ ಅವರು ಒತ್ತಾಯಿಸಿದ್ದಾರೆ.ಬಸವಣ್ಣನವರು ದೇವರಲ್ಲ, ಅವರು ಕಾಮುಕ ಹಾಗೂ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡವರು ಎಂಬ ಸುಳ್ಳುಗಳನ್ನು ಹರಡಿದ್ದಲ್ಲದೆ, ಅಕ್ಕಮಹಾದೇವಿಯೂ ಅಂಥವಳೇ ಎಂದು ರಮಾಕಾಂತ ಎಂಬ ವ್ಯಕ್ತಿ ತನ್ನ ಫೇಸ್ಬುಕ್ ಖಾತೆಯಲ್ಲಿ ಕೀಳು ಮಟ್ಟದ ವದಬಳಕೆಯೊಂದಿಗೆ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದಾನೆ.ಈ ಪೋಸ್ಟ್ ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿ ಮಾಡಿದ ಅವರು, ಜಗತ್ತಿಗೆ ಸಮಾನತೆಯ ಸಂದೇಶ ಸಾರಿದ ವಿಶ್ವಗುರು ಬಸವಣ್ಣ ಹಾಗೂ ಶಿವಶರಣೆ ಅಕ್ಕಮಹಾದೇವಿ ಅವರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅತ್ಯಂತ ಕೆಟ್ಟದಾಗಿ ಮತ್ತು ಅವ ಮಾನಕಾರಿಯಾಗಿ ಪೋಸ್ಟ್ ಮಾಡಿರುವಘಟನೆಯನ್ನು ವೀರಶೈವ ಲಿಂಗಾಯತ ಸಮಾಜ ತೀವ್ರವಾಗಿ ಖಂ ಡಿಸುತ್ತದೆ. ನಿಂದನಾತ್ಮಕ ಕೃತ್ಯ ಎಸಗಿದ ರಮಾಕಾಂತ ಎಂಬ ವ್ಯಕ್ತಿಯನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು. ರಮಾಕಾಂತ ಎಂಬ ವ್ಯಕ್ತಿ ಉದ್ದೇಶಪೂರ್ವಕವಾಗಿ ಸಮಾಜದ ಶಾಂತಿ ಕದಡಲು ಮತ್ತು ಧಾರ್ಮಿಕ ಭಾವ ನೆಗಳಿಗೆ ಧಕ್ಕೆ ತರಲು ಇಂತಹ ಕೃತ್ಯ ಎಸಗಿದ್ದಾನೆ. ಬಸವಣ್ಣನವರು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ. ಅಂತಹ ಮಹಾನ್ ಚೇತನಕ್ಕೆ ಅವಮಾನ ಮಾಡಿರುವುದು ಇಡೀ ಮಾನವಕುಲಕ್ಕೆ ಮಾಡಿದ ಅವಮಾನ. ಆರೋಪಿ ರಮಾಕಾಂತನನ್ನು ಕೂಡಲೇ ಪತ್ತೆ ಹಚ್ಚಿ ಅರೆಸ್ಟ್ ಮಾಡಬೇಕು. ಸೈಬರ್ ಕ್ರೈಂ ಅಡಿಯಲ್ಲಿ ಆತನ ವಿರುದ್ಧ ಕಠಿಣ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಪಟ್ಟಣ ಪಂಚಾಯತ್: ಮಾರ್ಚ್ 23 ರಂದು ಬಜೆಟ್ ಪೂರ್ವಭಾವಿ ಸಭೆ; ಸಾರ್ವಜನಿಕರ ಸಲಹೆಗೆ ಮುಕ್ತ ಅವಕಾಶ

ಧೈರ್ಯದ ದಾರಿ



**ಹೊಸ ಪಟ್ಟಣ:** ಪಟ್ಟಣದ ಸಮಗ್ರ ಅಭಿವೃದ್ಧಿಯ ದೂರದೃಷ್ಟಿಯೊಂದಿಗೆ 2026-27ನೇ ಸಾಲಿನ ವಾರ್ಷಿಕ ಮುಂಗಡ ಪತ್ರ (ಬಜೆಟ್) ಸಿದ್ಧಪಡಿಸುವ ನಿಟ್ಟಿನಲ್ಲಿ, ಹೊಸ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.
ಸಭೆಯ ಸಂಪೂರ್ಣ ವಿವರ: ದಿನಾಂಕ: ಮಾರ್ಚ್ 23, 2026 (ಸೋಮವಾರ)
ಸಮಯ: ಬೆಳಿಗ್ಗೆ 11:30 ಗಂಟೆಗೆ ಸ್ಥಳ: ಪಟ್ಟಣ ಪಂಚಾಯತ್ ಕಾರ್ಯಾಲಯದ ಸಭಾಂಗಣ
**ವರದಿಯ ಮುಖ್ಯಾಂಶಗಳು:**
ನಾಗರಿಕರೇ ಬಜೆಟ್ ರೂಪಿಸಿ: ಪಟ್ಟಣದ ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಬೀದಿ ದೀಪಗಳಂತಹ ಮೂಲಭೂತ ಸೌಕರ್ಯಗಳ ಸುಧಾರಣೆಗೆ ಸಂಬಂಧಿಸಿದಂತೆ ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರು ನೇರವಾಗಿ ತಮ್ಮ ಸಲಹೆಗಳನ್ನು ನೀಡಬಹುದು.
ಲಿಖಿತ ಸಲಹೆಗೂ ಅವಕಾಶ: ಸಭೆಯಲ್ಲಿ ಭಾಗವಹಿಸಿ ಮೌಖಿಕವಾಗಿ ತಿಳಿಸುವುದರ ಜೊತೆಗೆ, ಪಟ್ಟಣದ ಪ್ರಗತಿಗೆ ಪೂರಕವಾದ ಯೋಜನೆಗಳ ಬಗ್ಗೆ ಲಿಖಿತ ರೂಪದ ಮನವಿಗಳನ್ನೂ ಸಲ್ಲಿಸಲು ಅವಕಾಶವಿದೆ.
ಮುಖ್ಯ ಅಧಿಕಾರಿಗಳ ಮನವಿ: "ಬಜೆಟ್ ಎಂಬುದು ಕೇವಲ ಅಂಕಿ-ಅಂಶಗಳ ಪಟ್ಟಿಯಾಗದೆ, ಜನರ ಆಶೋತ್ತರಗಳಿಗೆ ಸ್ಪಂದಿಸುವ ಜನಸ್ನೇಹಿ ಆಯವ್ಯಯವಾಗಬೇಕು. ಆದ್ದರಿಂದ ಪಟ್ಟಣದ ಪ್ರಗತಿಪರ ಚಿಂತಕರು, ನೊಂದಾಯಿತ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು. ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಹಕರಿಸಬೇಕು" ಎಂದು ಮುಖ್ಯ ಅಧಿಕಾರಿಗಳು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ವೀರ ಸಿಂಧೂರ ಲಕ್ಷ್ಮಣ ತರಕಾರಿ ಮಾರುಕಟ್ಟೆ ಸಿದ್ಧ: ಶಾಸಕ ಜಗದೀಶ ಗುಡಗುಂಟಿ



**ಜಮಖಂಡಿ:ಮಾ.16:** ನಗರದ ಮಾರುಕಟ್ಟೆ ಪ್ರದೇಶದಲ್ಲಿ ಬೀದಿಬದಿ ವ್ಯಾಪಾರಿಗಳು ರಸ್ತೆಯಲ್ಲೇ ಕುಳಿತು ತರಕಾರಿ ಮಾರಾಟ ಮಾಡುವುದರಿಂದ ಉಂಟಾಗುತ್ತಿದ್ದ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ವೀರ ಸಿಂಧೂರ ಲಕ್ಷ್ಮಣ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲಾಗಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.
ನಗರಸಭೆಯ ವತಿಯಿಂದ ನಿರ್ಮಿಸಲಾದ ವೀರ ಸಿಂಧೂರ ಲಕ್ಷ್ಮಣ ತರಕಾರಿ ಮಾರುಕಟ್ಟೆಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ನಗರದಲ್ಲಿ ಬೀದಿಬದಿ ವ್ಯಾಪಾರಿಗಳು ಚರಂಡಿ ಪಕ್ಕದಲ್ಲಿ ಕುಳಿತು ವ್ಯಾಪಾರ ಮಾಡಬೇಕಾದ ಪರಿಸ್ಥಿತಿ ಇತ್ತು. ಇದರಿಂದ ಅಂಗಡಿಕಾರರು, ವಾಹನ ಸಂಚಾರ ಹಾಗೂ ಸಾರ್ವಜನಿಕರ ಸಂಚಾರಕ್ಕೆ ಸಾಕಷ್ಟು ತೊಂದರೆ ಉಂಟಾಗುತ್ತಿತ್ತು. ಇದೀಗ ಮಾರುಕಟ್ಟೆ ಸಿದ್ಧಗೊಂಡಿರುವುದರಿಂದ ವ್ಯಾಪಾರಿಗಳಿಗೆ ವ್ಯವಸ್ಥಿತ ಸ್ಥಳ ದೊರೆಯುವುದರೊಂದಿಗೆ ಟ್ರಾಫಿಕ್ ಸಮಸ್ಯೆ ಕೂಡ ಕಡಿಮೆಯಾಗಲಿದೆ ಎಂದು ತಿಳಿಸಿದರು.

ನಗರದ ಜನಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಹಾಗೂ ನಗರಸಭೆ ಪ್ರಯತ್ನಿಸುತ್ತಿವೆ. ಬ್ರಿಟಿಷರ ಕಾಲದಲ್ಲಿ ಕಾರಾಗೃಹವಾಗಿದ್ದ ಈ ಸ್ಥಳವನ್ನು ಅಂದಿನ ಶಾಸಕ ಶ್ರೀಕಾಂತ ಕುಲಕರ್ಣಿ ಅವರು ಸರ್ಕಾರದ ಮೇಲೆ ಒತ್ತಡ ತಂದು ಕಂದಾಯ ಇಲಾಖೆಗೆ ವರ್ಗಾಯಿಸಿಕೊಂಡಿದ್ದರು. ನಂತರ ಕಂದಾಯ ಇಲಾಖೆಯಿಂದ ನಗರಸಭೆಗೆ ವರ್ಗಾಯಿಸಿ ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿದರು.
ಸ್ವಾತಂತ್ರ್ಯ ಸೇನಾನಿ ಸಿಂಧೂರ ಲಕ್ಷ್ಮಣರನ್ನು ಇದೇ ಸ್ಥಳದಲ್ಲಿ ಬಂಧಿಸಿ ಇರಿಸಲಾಗಿದ್ದ ಹಿನ್ನೆಲೆ ಅವರ ಹೆಸರಿನಲ್ಲಿ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲಾಗಿದೆ ಎಂದು ಶಾಸಕರು ತಿಳಿಸಿದರು.
ನಗರಸಭೆಯ ಪೌರಾಯುಕ್ತ ಜ್ಯೋತಿ ಗಿರೀಶ ಪ್ರಾಸ್ತಾವಿಕವಾಗಿ ಮಾತನಾಡಿ, ಹಳೆಯ ಕಾಲದ ಕಾರಾಗೃಹವಾಗಿದ್ದ ಈ ಪ್ರದೇಶದಲ್ಲಿ ಸಿಥಿಲಗೊಂಡಿದ್ದ ಗೋಡೆಗಳನ್ನು ತೆರವುಗೊಳಿಸಿ ವ್ಯಾಪಾರಿಗಳು ಕುಳಿತುಕೊಳ್ಳಲು ಪ್ರತ್ಯೇಕ ಜಾಗಗಳನ್ನು ಗುರುತಿಸಲಾಗಿದೆ. ಜೊತೆಗೆ ದ್ವಿಚಕ್ರ ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಸುಲಭ ಶೌಚಾಲಯ ನಿರ್ಮಿಸಲಾಗಿದ್ದು ವ್ಯಾಪಾರಿಗಳು ಮತ್ತು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಜಿ.ಎಸ್. ನ್ಯಾಮಗೌಡ, ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ನಬಿಸಾಬ ಮುಲ್ಲಾ, ಮುಖಂಡರಾದ ಡಾ. ವಿಜಯಲಕ್ಷ್ಮೀ ತುಂಗಳ, ಅಜಯ ಕಡಪಟ್ಟಿ, ಮಲ್ಲುದಾನಗೌಡ, ಶ್ರೀಧರ ಕಂಬಿ, ಅನಸೂಯಾ ಅಸುಗಡೆ, ಶಂಕರ ಕಾಳೆ, ರಮೇಶ ಆಳಬಾಳ, ರಾಜು ಕಡಕೋಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.
ಸಿಬ್ಬಂದ್ದಿ ಶ್ರೀಕಾಂತ್ ಘಾಟಗೆ ನೀರುಪಿಸಿದರು ಪೌರಾಯುಕ್ತ ಜ್ಯೋತಿ ಗೀರಿಶ ವಂಧಿಸಿದರು

## ಯನಗುಂದಾ ಸೇತುವೆ ಕಾಮಗಾರಿ ಪರಿಶೀಲಿಸಿದ ಶಾಸಕರುಗುಣಮಟ್ಟದಲ್ಲಿ ಲೋಪವಾದರೆ ಸಹಿಸುವುದಿಲ್ಲ : ಶಾಸಕ ಪ್ರಭು ಚವ್ಹಾಣ



**ಔರಾದ್ :ಮಾ.16:** ತಾಲ್ಲೂಕಿನ ಯನಗುಂದಾ ಗ್ರಾಮದ ಬಳಿ 3 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ಸೇತುವೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶಾಸಕ ಪ್ರಭು ಬಿ.ಚವ್ಹಾಣ ಅವರು ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.
ಈ ಸಂದರ್ಭದಲ್ಲಿ ಕಾಮಗಾರಿಯ ಪ್ರಗತಿಯ ಕುರಿತಂತೆ ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಮಹಾರಾಷ್ಟ್ರ ಗಡಿಯಿಂದ ಚಿಂತಾಕಿ, ಖಾಶೆಂಪೂರ, ಯನಗುಂದಾ, ತೇಗಂಪೂರ, ಮಮದಾಪೂರ, ಔರಾದ ಜನರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದ್ದು, ಕಾಮಗಾರಿ ಅಂದಾಜು ಪತ್ರಿಕೆಯಲ್ಲಿರುವಂತೆ ಸೇತುವೆ ನಿರ್ಮಾಣವಾಗಬೇಕು. ಕಬ್ಬಿಣದ ಬಳಕೆ, ಸಿಮೆಂಟ್ ಹಾಗೂ ಮತ್ತಿತರೆ ಸಲಕರಣೆಗಳನ್ನು ಸರಿಯಾದ ಪ್ರಮಾಣದಲ್ಲಿ ಬಳಕೆ ಮಾಡಬೇಕು. ಗುಣಮಟ್ಟದ ವಿಷಯದಲ್ಲಿ ಲೋಪಗಳು ಕಾಣಿಸಿದರೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲವೆಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.ಕಳೆದ ಮಳೆಗಾಲದ ಸಂದರ್ಭದಲ್ಲಿ ಭೀಕರ ಮಳೆಯಿಂದಾಗಿ ಸೇತುವೆ ಸಂಪೂರ್ಣ ಕೊಚ್ಚಿಕೊಂಡು ಹೋಗಿ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಏಕೈಕ ಪ್ರಮುಖ ಮಾರ್ಗವು ಅನೇಕ ದಿನಗಳ ವರೆಗೆ ಸ್ಥಗಿತಗೊಂಡಿತ್ತು. ಸ್ಥಳಕ್ಕೆ ಭೇಟಿ ನೀಡಿದಾಗ ಗ್ರಾಮಸ್ಥರು ಹೊಸ ಸೇತುವೆ ಮಾಡಿಕೊಡಬೇಕೆಂದು ಒತ್ತಾಯಿಸಿದ್ದರು. ಗ್ರಾಮ ಸಂಚಾರದ ವೇಳೆಯೂ ಈ ಬಗ್ಗೆ ಬೇಡಿಕೆ ಸಲ್ಲಿಸಿದ್ದರು. ಆದ್ದರಿಂದ 3 ಕೋಟಿ ಅನುದಾನ ಒದಗಿಸಿ ಸೇತುವೆ ಕಾಮಗಾರಿ ನಿರ್ಮಿಸಲಾಗುತ್ತಿದೆ. ಇನ್ನು ಮುಂದೆ ಮಳೆಯಿಂದಾಗಿ ರಸ್ತೆ ಸಂಚಾರಕ್ಕೆ ಅಡ್ಡಿಯಾಗುವುದಿಲ್ಲ. ಈ ಭಾಗದ ಗ್ರಾಮಗಳ ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಶಾಸಕರು ಹೇಳಿದರು.ಬಹುಬೇಡಿಕೆಯಾಗಿದ್ದ ಸೇತುವೆ ಕಾಮಗಾರಿ ನಿರ್ಮಿಸುತ್ತಿರುವುದರಿಂದ ಬಹುದಿನಗಳ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಪ್ರತಿ ಮಳೆಗಾಲದ ಸಂದರ್ಭದಲ್ಲಿ ರಸ್ತೆ ಮುಚ್ಚುವ ಭೀತಿ ಎದುರಾಗುತ್ತಿತ್ತು. ನೀರು ಬತ್ತಿ ಹೋಗುವ ವರೆಗೆ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ರೈತರು ತಮ್ಮ ಬೇಳೆ ಕಾಳುಗಳನ್ನು ಮಾರಾಟ ಮಾಡಲು ಮತ್ತು ಸಾರ್ವಜನಿಕರು ನಿತ್ಯ ವ್ಯವಹಾರಗಳಿಗೆ ಓಡಾಡಲು ಸಾಕಷ್ಟು ಅನಾನುಕೂಲ ಎದುರಿಸುತ್ತಿದ್ದರು. ನಮ್ಮ ಮನವಿಗೆ ಸ್ಪಂದಿಸಿ ಹೊಸ ಸೇತುವೆ ನಿರ್ಮಿಸುತ್ತಿರುವುದಕ್ಕೆ ಇದೇ ವೇಳೆ ಗ್ರಾಮಸ್ಥರು ಶಾಸಕರಿಗೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಿವರಾಜ ಅಲ್ಮಾಜೆ, ರಾಮಶೆಟ್ಟಿ ಪನ್ನಾಳೆ, ಪ್ರತೀಕ ಚವ್ಹಾಣ, ಸುಜಿತ ರಾಠೋಡ, ವಿಲಾಸ ಚವ್ಹಾಣ, ಶಿವಕಾಂತ ಮಜಗೆ, ಸಂಗಮೇಶ ಪಾಟೀಲ, ಜಗದೀಶ ಪಾಟೀಲ, ಗೋಪಾಲರೆಡ್ಡಿ, ರಾಜಕುಮಾರ, ಶಂಕರ ರೆಡ್ಡಿ, ಅಶೋಕ ಹಂಗರಗೆ, ಗಣಪತಿ, ಸಂತೋಷ ಪಾಟೀಲ, ಬಸವರಾಜ ಶೇಟಕಾರ್, ಬಸಗೊಂಡ, ಚಂದ್ರಪ್ಪಾ, ಜಗನಾಥ, ಅಶೋಕ, ಗಣಪತಿ, ಶೇಷಾರಾವ್ ಹಾಗೂ ಯನಗುಂದಾ ಗ್ರಾಮದ ಮುಖಂಡರು ಹಾಗೂ ಅನೇಕ ಗ್ರಾಮಸ್ಥರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE